## ಶುಕ್ರವಾರ, ೧೫ನೇ ಆಗಸ್ಟ್, ೧೯೪೭

ಭಾರತ ಸಂವಿಧಾನ ರಚನಾಸಭೆ, ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಬೆಳಿಗ್ಗೆ ಹತ್ತು ಘಂಟೆಗೆ ಸಮಾವೇಶಗೊಂಡಿತು. ಮಾನ್ಯ ಸಭಾಧ್ಯಕ್ಷ (ಗೌರವಾನ್ವಿತ ಡಾ|| ರಾಜೇಂದ್ರ ಪ್ರಸಾದ್) ಭಾರತದ ಗವರ್ನರ್ ಜನರಲ್ ಲಾರ್ಡ್ ಮೌಂಟ್‌ಬ್ಯಾಟನ್ ಮತ್ತು ಲೇಡಿ ಮೌಂಟ್‌ಬ್ಯಾಟನ್ ಅವರೊಡನೆ ಸಭಾಂಗಣಕ್ಕೆ ಪ್ರವೇಶಿಸಿದರು.

### ಸಂದೇಶಗಳು

**ಮಾನ್ಯ ಸಭಾಧ್ಯಕ್ಷರು :** ಕೆಲವು ಸಂದೇಶಗಳು ಬಂದಿದ್ದು ನಾನು ಅವುಗಳನ್ನು ಓದುತ್ತೇನೆ.

**೧) ಬ್ರಿಟಿಷ್ ಸಂಯುಕ್ತ ರಾಜ್ಯದ ಪ್ರಧಾನ ಮಂತ್ರಿಯವರ ಸಂದೇಶ:**

ಬ್ರಿಟಿಷ್ ಸಂಯುಕ್ತ ರಾಜ್ಯ ಸರ್ಕಾರದ ನನ್ನ ಸಹೋದ್ಯೋಗಿಗಳೊಂದಿಗೆ ನಾನು ಭಾರತ ಸರ್ಕಾರದ ಹಾಗೂ ಭಾರತದ ಜನತೆಗೆ ಇಂದಿನ ಐತಿಹಾಸಿಕ ದಿನದ ಅಭಿನಂದನೆಗಳನ್ನು ಹಾಗೂ ಶುಭಾಶಯಗಳನ್ನು ತಿಳಿಸುತ್ತಿದ್ದೇನೆ. ಭಾರತವು ನೆಮ್ಮದಿ ಹಾಗೂ ಅಭ್ಯುದಯದೊಂದಿಗೆ ಮುನ್ನಡೆಯಲಿ ಹಾಗೂ ವಿಶ್ವದ ಶಾಂತಿ ಹಾಗೂ ಅಭ್ಯುದಯಕ್ಕೆ ಕೊಡುಗೆ ಸಲ್ಲಿಸಲಿ ಎಂಬುದು ನಮ್ಮ ಹಾರೈಕೆ.

**೨) ಕೆಂಟರ್‌ಬರಿಯ ಪೂಜ್ಯ ಆರ್ಚ್‌ಬಿಷಪ್‌ರ ಸಂದೇಶ:**

ಭಾರತ ಮತ್ತು ಪಾಕಿಸ್ತಾನಗಳು ಸ್ವತಂತ್ರ ರಾಷ್ಟ್ರಗಳಾಗಿ ಸ್ವಯಂ ಆಡಳಿತದ ಪೂರ್ಣ ಹೊಣೆ ಹೊತ್ತಿರುವ ಈ ಸಂದರ್ಭದಲ್ಲಿ ಈ ದೇಶದ ಕ್ರಿಶ್ಚಿಯನ್ ಸಮುದಾಯದ ಪರವಾಗಿ ನಿಮಗೆ ಅಭಿನಂದನೆ ಹಾಗೂ ಶುಭಾಶಯಗಳನ್ನು ತಿಳಿಸುತ್ತಿದ್ದೇನೆ. ಭಗವಂತನ ಕೃಪೆಯಿಂದ ಈವರೆಗಿನ ಕಷ್ಟಗಳನ್ನು ದಾಟಿ ಬಂದಿದ್ದು, ಕಳೆದ ದಿನಗಳ ಕ್ಲೇಶದ ತರುವಾಯ ಇಂದಿನ ಆಕಾಂಕ್ಷಾಪೂರ್ಣತೆಯ ಹಂತ ಬಂದಿದೆ. ಎರಡೂ ದೇಶಗಳು ನ್ಯಾಯ ಹಾಗೂ ಶಾಂತಿಯಿಂದ ಸಹೋದರ ಭಾವದಿಂದ ಅಭಿವೃದ್ಧಿಹೊಂದಿ ಉತ್ತಮ ಭವಿಷ್ಯದತ್ತ ಸಾಗಲಿ.

**೩) ಚೀನಾ ರಿಪಬ್ಲಿಕ್ ದೇಶದ ಅಧ್ಯಕ್ಷರ ಜನರಲಿಸಿಮೊ ಚಿಯಾಂಗ್ ಕೈಷೇಕ್‌ರಿಂದ ಸಂದೇಶ:**

ಭಾರತದ ಜನತೆ ಸ್ವಾತಂತ್ರ್ಯದ ಹೊಸ ಯುಗದ ಸಂಭ್ರಮವನ್ನು ಆಚರಿಸುತ್ತಿರುವ ಈ ಶುಭ ಸಂದರ್ಭದಲ್ಲಿ, ನೀವು ಹಾಗೂ ಮಹಾತ್ಮ ಗಾಂಧಿ ಮಹತ್ತ್ವದ ಪಾತ್ರ ವಹಿಸಿರುವ ವೈಭವಪೂರ್ಣ ಹಾಗೂ ಸ್ಮರಣೀಯ ಸಾಧನೆಗಾಗಿ ನಿಮಗೆ ಹಾಗೂ ಭಾರತದ ಜನತೆಗೆ ಹಾರ್ದಿಕ ಅಭಿನಂದನೆ ತಿಳಿಸುತ್ತಿದ್ದೇನೆ. ಇದು ಸ್ವಾತಂತ್ರ್ಯ, ಸಮಾನತೆ ಹಾಗೂ ಪ್ರಗತಿಗಾಗಿ ಹೋರಾಡುತ್ತಿರುವ ಎಲ್ಲ ಜನರಿಗೂ ಸ್ಫೂರ್ತಿಯ ಸೆಲೆಯಾಗಿರುವುದೆಂಬ ನಂಬಿಕೆ ನನಗಿದೆ. ಭಾರತಕ್ಕೆ ಉಜ್ವಲ, ಯಶಸ್ವಿ ಭವಿಷ್ಯವನ್ನು ಕೋರಿ ನಾನು ಕಳಿಸುತ್ತಿರುವ ಶುಭಾಶಯಗಳನ್ನು ದಯವಿಟ್ಟು ಸ್ವೀಕರಿಸಿ.

**೪) ಕೆನಡಾ ಪ್ರಧಾನ ಮಂತ್ರಿಯವರಿಂದ ಸಂದೇಶ:**

ನಿಮಗೆ ಹಾಗೂ ನಿಮ್ಮ ಮೂಲಕ ಭಾರತ ಸರ್ಕಾರ ಹಾಗೂ ಜನತೆಗೆ, ಭಾರತವು ಸಂಪೂರ್ಣ ಸ್ವತಂತ್ರ ರಾಷ್ಟ್ರವಾದ ಸಂದರ್ಭದಲ್ಲಿ ಕೆನಡಾ ಸರ್ಕಾರ ಹಾಗೂ ಜನತೆಯ ಕಡೆಯಿಂದ ಹಾರ್ದಿಕ ಶುಭಾಶಯಗಳನ್ನು ತಿಳಿಸಲು ನನಗೆ ತುಂಬ ಸಂತೋಷವೆನಿಸುತ್ತದೆ.

**೫) ಆಸ್ಟ್ರೇಲಿಯಾದ ಪ್ರಧಾನ ಮಂತ್ರಿಯವರಿಂದ ಸಂದೇಶ:**

ಭಾರತ ಸರ್ಕಾರ ಹಾಗೂ ಜನತೆ ಆಗಸ್ಟ್ ೧೫ರಂದು ಆಚರಿಸುತ್ತಿರುವ ಐತಿಹಾಸಿಕ ಶುಭ ಸಂದರ್ಭಕ್ಕಾಗಿ ಆಸ್ಟ್ರೇಲಿಯಾ ಸರ್ಕಾರ ಹಾಗೂ ಜನತೆಯ ಅಭಿನಂದನೆ ಹಾಗೂ ಶುಭಾಶಯಗಳನ್ನು ತಿಳಿಸಲಿಚ್ಛಿಸುತ್ತೇನೆ. ನಿಮ್ಮ ದೇಶ ಪಡೆದಿರುವ ಮುಕ್ತ ಹಾಗೂ ಸರ್ವಸ್ವತಂತ್ರ ಸ್ಥಾನಮಾನದ ಬಗ್ಗೆ ಆಸ್ಟ್ರೇಲಿಯಾ ಜನತೆ ಸಂತೋಷಿಸುತ್ತಾರೆ ಮತ್ತು ಬ್ರಿಟಿಷ್ ಕಾಮನ್‌ವೆಲ್ತ್ ರಾಷ್ಟ್ರಗಳ ಹೊಸ ಸಹಸದಸ್ಯತ್ವಕ್ಕೆ ನಿಮ್ಮನ್ನು ಹಾರ್ದಿಕವಾಗಿ ಸ್ವಾಗತಿಸುತ್ತಾರೆ.

ನಿಮ್ಮ ಸಂಪ್ರದಾಯಗಳು, ಸಂಸ್ಕೃತಿ, ಪರಿವರ್ತನೆಯ ಈ ಕಾಲವನ್ನು ಸುಗಮಗೊಳಿಸಲು ನಿಮ್ಮಲ್ಲಿ ಉತ್ಸಾಹ ತುಂಬುತ್ತಿರುವ ಚೈತನ್ಯ–ಇವು ಭಾರತದ ಜನತೆಯ ಮುಂದಿರುವ ಉಜ್ವಲ ಭವಿಷ್ಯವನ್ನು ಖಚಿತ ಪಡಿಸುತ್ತವೆಂದು ಭರವಸೆಯಿಂದ ನಿರೀಕ್ಷಿಸಲಾಗಿದೆ.

**೬) ಎಕ್ಸಿಕ್ಯುಟಿವ್ ಯುವಾನ್, ನಾನ್‌ಕಿಂಗ್‌ನ ಅಧ್ಯಕ್ಷರ ಸಂದೇಶ:**

ಭಾರತವು ದೀರ್ಘಕಾಲದಿಂದ ಪೋಷಿಸಿಕೊಂಡು ಬಂದ ಆಸೆ ನೆರವೇರಿದ ಈ ಐತಿಹಾಸಿಕ ಸಂದರ್ಭಕ್ಕಾಗಿ ನಿಮಗೆ ಹಾಗೂ ಭಾರತದ ಜನತೆಗೆ ಶುಭಾಶಯ ತಿಳಿಸಲು ನನಗೆ ಸಂತೋಷವೆನಿಸುತ್ತಿದೆ. ಏಷ್ಯಾ ಖಂಡದಲ್ಲಿ ಮತ್ತೊಂದು ದೊಡ್ಡ ದೇಶ ಮರುಜನ್ಮ ಪಡೆದುದಕ್ಕೆ ಚೀನಾ ಜನತೆಗೆ ಸಂತೋಷವಾಗಿದೆ. ಭಾರತದ ಹಾಗೂ ಚೀನಾ ದೇಶಗಳಿಗೆ ೨೦೦೦ ಮೈಲಿಗಳ ಒಂದೇ ಸರಹದ್ದು ಇದ್ದು, ಹಲವಾರು ಶತಮಾನಗಳಿಂದ ಎರಡೂ ದೇಶಗಳ ನಡುವೆ ನಿಕಟ ಹಾಗೂ ಸ್ನೇಹಪೂರ್ಣ ಸಂಬಂಧವಿದೆ. ಕಳೆದ ಜಾಗತಿಕ ಯುದ್ಧದ ಸಮಯದಲ್ಲಿ ಎರಡೂ ದೇಶಗಳು ಜೊತೆಯಾಗಿ ನಿಂತಿದ್ದು, ವಿಶ್ವಾಶಾಂತಿಯ ಸಮಾನ ಗುರಿಯತ್ತ ನಿಸ್ಸಂಶಯವಾಗಿ ಮುಂದುವರಿಯುತ್ತವೆ. ನಿಮಗೆ ನಿರಂತರ ಯಶಸ್ಸು ಸಿಗಲೆಂದು ಹಾರೈಸುತ್ತ, ಭಾರತದ ಜನತೆಯ ಸಂತೋಷ ಹಾಗೂ ಅಭ್ಯುದಯವನ್ನು ಆಶಿಸಿ ಶುಭಾಶಯಗಳನ್ನು ತಿಳಿಸುತ್ತಿದ್ದೇನೆ.

**೭) ಇಂಡೋನೇಷ್ಯಾ ರಿಪಬ್ಲಿಕ್ ಪರವಾಗಿ ಡಾ. ಸೋಡರ್ ಸೋನೊರಿಂದ ಸಂದೇಶ:**

ಭಾರತ ಸ್ವತಂತ್ರ ದೇಶವಾದ ಸಂದರ್ಭದಲ್ಲಿ ಇಂಡೋನೇಷ್ಯಾ ತನ್ನ ಸಂತೋಷ–ಸ್ನೇಹಭಾವವನ್ನು ಪ್ರಕಟಿಸುತ್ತದೆ. ಇಂಡೋನೇಷ್ಯಾ ರಿಪಬ್ಲಿಕ್ ಭಾರತವನ್ನು ಮಿತ್ರತ್ವದಿಂದ ಕಾಣುತ್ತದೆ. ಅಪಾಯ ಹಾಗೂ ತೊಂದರೆಯ ಸಮಯದಲ್ಲಿ ಭಾರತ ಸಹಾಯ ಮಾಡಿದೆ ಮತ್ತು ಯಾವಾಗಲೂ ಮಾಡುತ್ತದೆ. ಎರಡೂ ದೇಶಗಳ ರಾಷ್ಟ್ರೀಯತೆ ಮಾನವೀಯತೆಯನ್ನು ಆಧರಿಸಿದ್ದು, ಆ ಬಂಧುರತೆ ಇನ್ನಷ್ಟು ಗಟ್ಟಿಗೊಳ್ಳುತ್ತದೆಂದು ಹಾಗೂ ಭೋಗ–ವೈಭವಗಳ ನಡುವೆಯೂ ದಾರಿದ್ರ್ಯದಲ್ಲಿ ಬಹುಕಾಲ ಬದುಕಿದ ಲಕ್ಷಾಂತರ ಜನರ ಸ್ವಾತಂತ್ರ್ಯ ಹಾಗೂ ಏಳಿಗೆಗಾಗಿ, ನ್ಯಾಯ ಹಾಗೂ ಶಾಂತಿಗಾಗಿ ಹೋರಾಡುವಲ್ಲಿ ಮಿತ್ರತ್ವದ ಬಂಧುರತೆ ಇನ್ನಷ್ಟು ಬಲಗೊಳ್ಳುವುದೆಂದು ಆಶಿಸುತ್ತೇನೆ.

ಭಾರತದ ಜನತೆ ಕಳೆದ ಹಲವಾರು ವರ್ಷಗಳಿಂದ ಶ್ರೇಷ್ಠ ಮುಖಂಡರ ಮುಂದಾಳತ್ವದಲ್ಲಿ ಸಾಗಿಬಂದಿದ್ದು ಇನ್ನು ಮುಂದೆ ಅದಕ್ಕೆ ನಿಸ್ಸಂದೇಹವಾಗಿಯೂ ಉತ್ತಮ ಹಾಗೂ ಸಂತೋಷಪೂರ್ಣ ಭವಿಷ್ಯವಿದೆ. ಭಾರತ ಕೇವಲ ನ್ಯಾಯ ಹಾಗೂ ಏಳಿಗೆಯ ನಾಡು ಮಾತ್ರವಲ್ಲದೇ ಏಷ್ಯಾಗೆ ರಕ್ಷಣೆ ನೀಡುವಂಥದಾಗಿ ಶಾಂತಿ ರಕ್ಷಕನಾಗಿರುತ್ತದೆ.

ರಿಪಬ್ಲಿಕ್ ಆಫ್ ಇಂಡೋನೇಷ್ಯಾ ಸರ್ಕಾರ ಹಾಗೂ ಜನತೆ, ನಿಮ್ಮ ಜನತೆಗೆ, ಸರ್ಕಾರಕ್ಕೆ ಹಾಗೂ ನಿಮಗೆ ಈ ಶ್ರೇಷ್ಠ ಐತಿಹಾಸಿಕ ಕ್ಷಣದಲ್ಲಿ ಸಂತೋಷ ಹಾಗೂ ಅಭಿವೃದ್ಧಿಯನ್ನು ಹಾರೈಸುತ್ತ ಶುಭಾಶಯಗಳನ್ನು ಕಳುಹಿಸುತ್ತಿದ್ದೇವೆ.

**೮) ನೇಪಾಳದ ದೊರೆಯ ಮಂತ್ರಿಯಿಂದ ಸಂದೇಶ:**

ಭಾರತ ಸ್ವತಂತ್ರ ರಾಷ್ಟ್ರವಾಗಿ ರೂಪುಗೊಂಡಿರುವುದಕ್ಕಾಗಿ ನಾನು ಹಾಗೂ ನನ್ನ ಸಿಬ್ಬಂದಿ ದೇಶಕ್ಕೆ ಹಾಗೂ ಜನತೆಗೆ ಸಂತೋಷ ಹಾಗೂ ಪ್ರಗತಿದಾಯಕ ಭವಿಷ್ಯವನ್ನು ಹಾರೈಸಿ ಶುಭಾಶಯಗಳನ್ನು ಕಳಿಸುತ್ತಿದ್ದೇವೆ.

**೯) ಓಸ್ಲೋದ ಪ್ರಧಾನ ಮಂತ್ರಿ ಹಾಗೂ ವಿದೇಶಾಂಗ ವ್ಯವಹಾರಗಳ ಸಚಿವರಿಂದ ಸಂದೇಶ:**

ಭಾರತದ ಜನತೆ ರಾಷ್ಟ್ರೀಯ ಸ್ವಾತಂತ್ರ್ಯದಿನದ ಸಂಭ್ರಮಾಚರಣೆಯಲ್ಲಿ ತೊಡಗಿರುವ ಈ ಸಂದರ್ಭದಲ್ಲಿ ನಿಮ್ಮ ದೇಶದ ಅಭ್ಯುದಯಕ್ಕಾಗಿ ಹಾರೈಸಿ ನಿಮಗೆ ಶುಭಾಶಯಗಳನ್ನು ಕಳುಹಿಸುತ್ತಿದ್ದೇನೆ.

**ಘನತೆವೆತ್ತ ಗವರ್ನರ್ ಜನರಲ್ ಅವರ ಭಾಷಣ**

**ಮಾನ್ಯ ಸಭಾಧ್ಯಕ್ಷರು** : ಘನತೆವೆತ್ತ ತಾವು ಸದನವನ್ನು ಉದ್ದೇಶಿಸಿ ಭಾಷಣ ಮಾಡುವಿರಾ?

**ಘನತೆವೆತ್ತ ಗವರ್ನರ್ ಜನರಲ್** : ಸಭಾಧ್ಯಕ್ಷರೆ ಹಾಗೂ ಸಂವಿಧಾನ ರಚನಾಸಭೆಯ ಸದಸ್ಯರೆ,

ಮಾನ್ಯ ಬ್ರಿಟಿಷ್ ಚಕ್ರವರ್ತಿಗಳು ಈ ದಿನ ನಿಮಗೆ ಸಂದೇಶ ಕಳುಹಿಸಿದ್ದಾರೆ. ಚಕ್ರವರ್ತಿಗಳ ಸಂದೇಶ ಮುಂದಿನಂತಿದೆ:

"ಇಂದಿನ ಐತಿಹಾಸಿಕ ದಿನದಂದು ಬ್ರಿಟಿಷ್ ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿ ಭಾರತವು ಮುಕ್ತ ಹಾಗೂ ಸ್ವತಂತ್ರ ಆಧಿಪತ್ಯವಾಗಿ ಸ್ಥಾನ ಪಡೆದಿದೆ. ಅದಕ್ಕಾಗಿ ನಾನು ನಿಮಗೆಲ್ಲ ಹಾರ್ದಿಕ ಅಭಿನಂದನೆ ಹಾಗೂ ಶುಭಾಶಯಗಳನ್ನು ಕಳುಹಿಸುತ್ತಿದ್ದೇನೆ.

ಸ್ವಾತಂತ್ರ್ಯವನ್ನು ಪ್ರೀತಿಸುವ ಎಲ್ಲ ಕಡೆ ಇರುವ ಜನರು ನಿಮ್ಮ ಸಂಭ್ರಮವನ್ನು ಹಂಚಿಕೊಳ್ಳಲು ಬಯಸುತ್ತಾರೆ. ಏಕೆಂದರೆ, ಸಮ್ಮತಿ ಸಹಿತವಾದ ಈ ಅಧಿಕಾರ ವರ್ಗಾವಣೆಯಿಂದ ಒಂದು ಪ್ರಜಾಪ್ರಭುತ್ವ ದೇಶದ ಆದರ್ಶ ನೆರವೇರಿದಂತಾಗಿದೆ. ಇದಕ್ಕೆ ಬ್ರಿಟಿಷ್ ಹಾಗೂ ಭಾರತದ ಜನತೆ ಸಮಾನವಾಗಿ ದೃಢತೆಯಿಂದ ಅರ್ಪಿಸಿಕೊಂಡಿದ್ದಾರೆ. ಶಾಂತಿಯುತ ಬದಲಾವಣೆಯ ಮೂಲಕ ಇದನ್ನು ಸಾಧಿಸಲಾಗಿದೆ ಎಂಬ ವಿಚಾರ ಸ್ಫೂರ್ತಿದಾಯಕವಾಗಿದೆ.

ನಿಮ್ಮ ಮುಂದೆ ದೊಡ್ಡ ಜವಾಬ್ದಾರಿ ಇದೆ. ಈಗಾಗಲೇ ನೀವು ತೋರಿಸಿರುವ ಮುತ್ಸದ್ದಿತನವನ್ನು ಹಾಗೂ ತ್ಯಾಗವನ್ನು ನೋಡಿದಾಗ ನಿಮಗೆ ಇದು ದೊರೆತದ್ದು ಯೋಗ್ಯವಾಗಿದೆ ಎಂಬ ಭರವಸೆ ನನಗಿದೆ.

ಭಗವಂತನ ಆಶೀರ್ವಾದ ನಿಮ್ಮ ಮೇಲಿದ್ದು, ನಿಮ್ಮ ನಾಯಕರು ತಮ್ಮ ಮುಂದಿರುವ ಕೆಲಸ ಕಾರ್ಯಗಳಲ್ಲಿ ತಮ್ಮ ಬುದ್ಧಿಮತ್ತೆಯ ಮಾರ್ಗದರ್ಶನದಲ್ಲಿ ಮುನ್ನಡೆಯಲಿ ಎಂದು ಪ್ರಾರ್ಥಿಸುತ್ತೇನೆ. ಪ್ರಪಂಚದ ರಾಷ್ಟ್ರಗಳೊಂದಿಗಿನ ನಿಮ್ಮ ಸಂಬಂಧಗಳ ವಿಷಯದಲ್ಲಿ ಸ್ನೇಹ, ಸಹಿಷ್ಣುತೆ ಹಾಗೂ ಶಾಂತಿ ನಿಮಗೆ ಪ್ರೇರಣೆ ನೀಡಲಿ, ನಿಮ್ಮ ಜನತೆಯ ಹಾಗೂ ಮನುಕುಲದ ಅಭಿವೃದ್ಧಿ ಹಾಗೂ ಒಳಿತಿಗಾಗಿ ಮಾಡುವ ನಿಮ್ಮ ಎಲ್ಲ ಪ್ರಯತ್ನಗಳಲ್ಲಿ ನನ್ನ ಸಹಾನುಭೂತಿ ನಿಮ್ಮೊಂದಿಗಿರುತ್ತದೆ ಎಂಬ ನಂಬಿಕೆ ನಿಮಗಿರಲಿ."

ಆರು ತಿಂಗಳ ಹಿಂದೆಯಷ್ಟೇ ಆಟ್ಲೇಯವರು ನನ್ನನ್ನು ಕೊನೆಯ ವೈಸರಾಯ್ ಆಗಿ ಮಾಡಿದ ನೇಮಕಾತಿಯನ್ನು ಒಪ್ಪಿಕೊಳ್ಳಲು ಆಮಂತ್ರಿಸಿದರು. ಬ್ರಿಟಿಷ್ ಚಕ್ರವರ್ತಿಯವರ ಸರ್ಕಾರ ೧೯೪೮ರ ಜೂನ್ ವೇಳೆಗೆ ಭಾರತಕ್ಕೆ ಅಧಿಕಾರ ಹಸ್ತಾಂತರ ಮಾಡಲು ನಿರ್ಧರಿಸಿರುವುದರಿಂದ ಇದು ಸುಲಭದ ಕೆಲಸವಲ್ಲ ಎಂದು ತಿಳಿಸಿದರು. ಚಕ್ರವರ್ತಿಗಳು ನಿಗದಿ ಪಡಿಸಿದ ದಿನಾಂಕ ಬಹಳ ಬೇಗ ಎಂದು ಆ ಸಮಯದಲ್ಲಿ ಕೆಲವರಿಗೆ ಅನಿಸಿದ್ದುಂಟು. ಏಕೆಂದರೆ, ೧೫ ತಿಂಗಳಿನ ಅಲ್ಪಾವಧಿಯಲ್ಲಿ ಇಷ್ಟು ದೊಡ್ಡ ಕಾರ್ಯಾಚರಣೆ ಹೇಗೆ ಪೂರ್ಣಗೊಳ್ಳುತ್ತದೆ, ಎಂಬುದು ಅವರ ಭಾವನೆಯಾಗಿತ್ತು.

ಆದರೂ ಅಧಿಕಾರದ ಹಸ್ತಾಂತರಕ್ಕೆ ೧೯೪೮ರ ಜೂನ್ ತಿಂಗಳನ್ನು ನಿಗದಿ ಪಡಿಸಿದ್ದು ಬಹಳ ಬೇಗ ಎಂಬುದಕ್ಕಿಂತ ಬಹಳ ವಿಳಂಬದ್ದಾಯಿತೆಂಬ ಅಂಶವನ್ನು ನಾನು ಮನಗಂಡಾಗ ನಾನು ಭಾರತಕ್ಕೆ ಬಂದು ಒಂದು ವಾರವೂ ಆಗಿರಲಿಲ್ಲ. ನಾನು ಇಂಗ್ಲೆಂಡಿನಿಂದ ಹೊರಟಾಗ ಭಾರತದಲ್ಲಿ ಕೋಮು ಆತಂಕ ಹಾಗೂ ಗಲಭೆ ಕಾವೇರತೊಡಗಿದ್ದುದರ ಪರಿಕಲ್ಪನೆಯೂ ನನಗಿರಲಿಲ್ಲ. ಆದರೆ ಈ ದಳ್ಳುರಿ ಇಡೀ ದೇಶದ ತುಂಬ ಹರಡಬಹುದಾದ ಅಪಾಯವಿರುವುದರಿಂದ ಸಾಧ್ಯವಾದಷ್ಟು ಮುಂಚಿನ ದಿನಾಂಕವನ್ನು ನಿಗದಿ ಪಡಿಸುವ ನಿರ್ಧಾರ ಅಗತ್ಯ ಎಂದು ನನಗೆ ತೋರಿತು.

ಕೂಡಲೇ ನಾನು ಸರ್ವಪಕ್ಷಗಳ ನಾಯಕರೊಂದಿಗೆ ಚರ್ಚೆ ಆರಂಭಿಸಿದೆ. ಜೂನ್ ೩ ನಿಗದಿತ

ದಿನಾಂಕವೆಂದು ನಿರ್ಧರಿಸಲಾಯಿತು. ಇದಕ್ಕೆ ನೀಡಿದ ಸಮ್ಮತಿ ಉತ್ತಮ ರಾಜಕೀಯ ಮುತ್ಸದ್ದಿತನಕ್ಕೆ ಉದಾಹರಣೆ ಎಂದು ಪ್ರಪಂಚದ ರಾಷ್ಟ್ರಗಳೆಲ್ಲ ಪ್ರಶಂಸಿಸಿದುವು. ನಾಯಕರೊಂದಿಗಿನ ಮುಕ್ತ ರಾಯಭಾರದ ಮೂಲಕ ಪ್ರತಿ ಹಂತವನ್ನು ಕುರಿತು ಯೋಚಿಸಲಾಯಿತು. ಇದರ ಯಶಸ್ಸು ಅವರಿಗೇ ಸೇರುತ್ತದೆ. ಸಮಸ್ಯೆಗಳ ಸಂಕೀರ್ಣತೆ, ಆತಂಕದ ತೀವ್ರತೆಯ ಹಿನ್ನೆಲೆಯಲ್ಲಿ ಮುಕ್ತ ರಾಯಭಾರದ ಮಾರ್ಗವೊಂದೇ ಯೋಗ್ಯ ಉಪಾಯವಾಗಿತ್ತು ಎಂದು ನನ್ನ ನಂಬಿಕೆ. ಮೊದಲಿನ ನಿರ್ಧಾರಕ್ಕಿಂತ ಹತ್ತೂವರೆ ತಿಂಗಳು ಮುಂಚಿತವಾಗಿ ಅಧಿಕಾರ ಹಸ್ತಾಂತರ ಸಾಧ್ಯವಾದುದಕ್ಕೆ ಬುದ್ಧಿಮತ್ತೆ, ತಾಳ್ಮೆ ಹಾಗೂ ಸ್ನೇಹಪೂರ್ಣ ಸಹಾಯ ನೀಡಿದ ನಾಯಕರಿಗೆ ನಾನು ಗೌರವ ಸೂಚಿಸುತ್ತೇನೆ.

ಜೂನ್ ೩ನ್ನು ನಿಗದಿ ಪಡಿಸಿದ ಯೋಜನೆಗೆ ಒಪ್ಪಿಗೆ ದೊರೆತ ಸಭೆಯಲ್ಲೇ ನಾನು ವಿಭಜನೆಯ ಆಡಳಿತಾತ್ಮಕ ಪರಿಣಾಮಗಳನ್ನು ಚರ್ಚೆಗಾಗಿ ನಾಯಕರ ಮುಂದೆ ಮಂಡಿಸಿದಾಗ ಅವರು ಚರ್ಚೆಗೆ ಸಮ್ಮತಿಸಿದರು. ಎರಡೂವರೆ ತಿಂಗಳಿನ ಅಲ್ಪಾವಧಿಯಲ್ಲಿ ೪೦೦ ದಶಲಕ್ಷ ಜನಸಂಖ್ಯೆಯ ಉಪಖಂಡವನ್ನು ವಿಭಜಿಸಿ ಆಡಳಿತವನ್ನು ಎರಡು ಸ್ವತಂತ್ರ ರಾಷ್ಟ್ರಗಳಿಗೆ ಹಸ್ತಾಂತರಿಸುವ, ಇತಿಹಾಸದಲ್ಲೇ ದೊಡ್ಡದೆನಿಸುವ ಕೆಲಸದ ರೂಪುರೇಷೆಯನ್ನು ಸಿದ್ಧ ಪಡಿಸಲು, ಅಲ್ಲೇ ಆಗಲೇ ನಾವು ಒಂದು ಸಮಿತಿಯನ್ನು ರಚಿಸಿದೆವು. ಈ ಪ್ರಕ್ರಿಯೆಯನ್ನು ತ್ವರೆಗೊಳಿಸುವ ನನ್ನ ಉದ್ದೇಶದ ಹಿಂದಿದ್ದ ಕಾರಣವೆಂದರೆ ವಿಭಜನೆಯ ತತ್ತ್ವವನ್ನು ಒಮ್ಮೆ ಅಂಗೀಕರಿಸಿದ ಮೇಲೆ, ಎಲ್ಲ ಪಕ್ಷಗಳ ಹಿತದೃಷ್ಟಿಯಿಂದ ಅದನ್ನು ಆದಷ್ಟು ಬೇಗ ಅನುಷ್ಠಾನಗೊಳಿಸಬೇಕು ಎಂಬುದಾಗಿತ್ತು. ಯೋಚಿಸಿದುದಕ್ಕಿಂತ ವೇಗವಾಗಿ ಪ್ರಕ್ರಿಯೆಯನ್ನು ತ್ವರೆಗೊಳಿಸಿದೆವು. ಈ ವಿಸ್ಮಯಕಾರಿ ಫಲಿತಾಂಶ ಹೊರಬರಲು ಹಗಲು ರಾತ್ರಿ ಶ್ರಮಿಸಿದ ಸಚಿವರು ಹಾಗೂ ಉದ್ಯೋಗಿಗಳಿಗೆ ಇದರ ಯಶಸ್ಸು ಸಲ್ಲಬೇಕು.

ಸ್ವಾತಂತ್ರ್ಯವು ಅಖಂಡ ಭಾರತಕ್ಕೆ ಬರಲಿಲ್ಲವೆಂಬ ದುಃಖದಿಂದಾಗಿ ಕೆಲವರ ಮನಸ್ಸಿನಲ್ಲಿ ಸ್ವಾತಂತ್ರ್ಯೋದಯ ದಿಂದ ಬರುವ ಸಡಗರದ ಸಂತೋಷಕ್ಕೆ ತಡೆ ಉಂಟಾಗಿರುವುದೆಂದು ಹಾಗೂ ವಿಭಜನೆಯ ನೋವು ಇವತ್ತಿನ ಆಚರಣೆಯ ಸಂತೋಷವನ್ನು ಕತ್ತರಿಸಿಹಾಕಿದೆ ಎಂದು ನನಗೆ ಗೊತ್ತು. ನಿಮ್ಮ ನಾಯಕರು ಇಂಥ ಕಠಿಣ ನಿರ್ಧಾರವನ್ನು ಕೈಗೊಳ್ಳಲು ಬೆಂಬಲಿಸುವ ಮೂಲಕ ನೀವು ದೇಶಾಭಿಮಾನಿ ನಾಯಕರಷ್ಟೇ ಹೃದಯ ವೈಶಾಲ್ಯವನ್ನು ತೋರಿದ್ದೀರಿ.

ನನ್ನ ಸ್ಥಿತಿಯನ್ನು ಸಹಾನುಭೂತಿಯಿಂದ ಅರ್ಥಮಾಡಿಕೊಂಡ ನಿಮ್ಮ ನಾಯಕರಿಗೆ ನಾನು ಚಿರಋಣಿ. ಉದಾಹರಣೆಗೆ ಮಧ್ಯಸ್ಥಗಾರ ನ್ಯಾಯಾಧಿಕರಣಕ್ಕೆ ನಾನು ಅಧ್ಯಕ್ಷನಾಗಿರಬೇಕೆಂದು ತಮ್ಮ ಮೂಲ ಮನವಿಗೆ ಅವರು ಪಟ್ಟು ಹಿಡಿಯಲಿಲ್ಲ. ಪಂಜಾಬ್ ಹಾಗೂ ಬಂಗಾಳ ವಿಭಜನೆ ಕುರಿತಂತೆ ಇದ್ದ ಯಾವುದೇ ಹೊಣೆಗಾರಿಕೆಗೂ ನನ್ನನ್ನು ಕಟ್ಟಿಹಾಕದಿರಲು ಅವರು ಒಪ್ಪಿದರು. ಗಡಿ ಆಯೋಗಗಳಿಗೆ ಸಂಬಂಧಿಸಿದಂತೆ ಅಧ್ಯಕ್ಷರು ಹಾಗೂ ಸಿಬ್ಬಂದಿಯನ್ನು ತಾವೇ ಆಯ್ಕೆ ಮಾಡಿದರು, ಪರಿಶೀಲನಾಂಶಗಳನ್ನು ತಾವೇ ಸಿದ್ಧ ಪಡಿಸಿ ತೀರ್ಪನ್ನು ಅನುಷ್ಠಾನಗೊಳಿಸುವ ಹೊಣೆಯನ್ನು ತಾವೇ ವಹಿಸಿಕೊಂಡರು, ಅವರು ಇದನ್ನೆಲ್ಲ ಮಾಡಿರದೇ ಇದ್ದಿದ್ದರೆ ಇಂದು ನನ್ನಿಂದ ಇದು ಸಾಧ್ಯವಾಗುತ್ತಿರಲಿಲ್ಲ ಎಂಬುದು ನಿಮಗೆ ತಿಳಿದಿದೆ.

ಭಾರತದ ರಾಜ್ಯಗಳ ವಿಷಯದತ್ತ ಸಾಗೋಣ, ಜೂನ್ ೩ರ ಯೋಜನೆ ಬ್ರಿಟಿಷ್ ಭಾರತದಲ್ಲಿನ ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿತ್ತು. ಅದರಲ್ಲಿ ರಾಜ್ಯಗಳ ಕುರಿತಂತೆ ಕೇವಲ ಒಂದು ಪರಿಚ್ಛೇದದಲ್ಲಿ ತಿಳಿಸಲಾಗಿದ್ದು, ಅದರ ಮೇರೆಗೆ ಅಧಿಕಾರ ಹಸ್ತಾಂತರವಾದಾಗ ಭಾರತದ ಎಲ್ಲ ೫೬೫ ರಾಜ್ಯಗಳು ಸ್ವತಂತ್ರವಾಗುತ್ತಿದ್ದವು. ಇದರಲ್ಲಿ ಒಂದು ದೊಡ್ಡ ಸಮಸ್ಯೆ ಇದ್ದು, ಎಲ್ಲರನ್ನೂ ಸಂದೇಹ ಕಾಡುತ್ತಿತ್ತು. ಆದರೆ ರಾಜ್ಯಗಳ ಇಲಾಖೆಯ ರಚನೆಯಾದ ತರುವಾಯ, ಚಕ್ರವರ್ತಿಗಳ ಪ್ರತಿನಿಧಿಯಾದ ನನಗೆ ಈ ದೊಡ್ಡ ಪ್ರಶ್ನೆಯನ್ನು ಬಗೆಹರಿಸುವ ಕಾರ್ಯದಲ್ಲಿ ತೊಡಗಲು ಸಾಧ್ಯವಾಯಿತು. ದೂರದರ್ಶಿ ರಾಜಕೀಯ ಮುತ್ಸದ್ದಿಯಾದ

ಸರ್ದಾರ ವಲ್ಲಭಭಾಯಿ ಪಟೇಲರು ರಾಜ್ಯಗಳ ಇಲಾಖೆಯ ಪ್ರಭಾರಿ ಸದಸ್ಯರಾಗಿದ್ದು, ಅಲ್ಲಿ ರೂಪಿಸಲಾದ ಯೋಜನೆ ಭಾರತ ದೇಶದ ರಾಜ್ಯಗಳ ಹಿತದೃಷ್ಟಿಯಿಂದ ಅತ್ಯಂತ ಉತ್ತಮವಾಗುವುದೆಂದು ನನಗೆ ತೋರಿತು. ಬಹುಪಾಲು ರಾಜ್ಯಗಳು ಭೌಗೋಳಿಕವಾಗಿ ಭಾರತದೊಂದಿಗೆ ಜೋಡಣೆಗೊಂಡಿರುವುದರಿಂದ ಈ ಸಮಸ್ಯೆಯ ಪರಿಹಾರದ ದೊಡ್ಡ ಹೊಣೆ ಈ ದೇಶದ ಮೇಲಿತ್ತು. ಇದು ಆಳರಸರಿಗೆ ಹಾಗೂ ರಾಜ್ಯಗಳ ಸರ್ಕಾರಗಳಿಗೆ ಹಾಗೂ ಭಾರತ ಸರ್ಕಾರಕ್ಕೆ ಇದ್ದ ವಾಸ್ತವತೆಯ ಹಾಗೂ ಜವಾಬ್ದಾರಿಯ ಅರಿವಿಗೆ ದೊರೆತ ವಿಜಯ. ಏಕೆಂದರೆ, ಇದರಿಂದಲೇ ಎರಡೂ ಪಕ್ಷಗಳಿಗೆ ಸಮನಾಗಿ ಸ್ವೀಕಾರ ಯೋಗ್ಯವೆನಿಸಿದ ಇನ್‌ಸ್ಟ್ರುಮೆಂಟ್ ಆಫ್ ಆಕ್ಸೆಷನ್ ಸಿದ್ಧಪಡಿಸಲು ಸಾಧ್ಯವಾಯಿತು. ಸರಳ ಹಾಗೂ ನೇರವಾದ ಮತ್ತೊಂದು ಮುನ್ನಡೆ ಎಂದರೆ ಮೂರು ವಾರಗಳೊಳಗಾಗಿ, ಸಂಬಂಧ ಪಟ್ಟ ಎಲ್ಲ ರಾಜ್ಯಗಳು 'ಇನ್‌ಸ್ಟ್ರುಮೆಂಟ್ ಆಫ್ ಆಕ್ಸೆಷನ್' ಹಾಗೂ 'ಸ್ಟಾಂಡ್‌ಸ್ಟಿಲ್ ಅಗ್ರಿಮೆಂಟ್'ಗೆ ಸಹಿ ಹಾಕಿದ್ದವು. ಹೀಗೆ ३೦೦ ಮಿಲಿಯನ್ ಜನರನ್ನು ಹಾಗೂ ಈ ಉಪಖಂಡದ ಪ್ರಧಾನ ಭಾಗವನ್ನು ಒಳಗೊಂಡ ರಾಜಕೀಯ ರಚನೆಯೊಂದು ಸ್ಥಾಪಿತವಾಯಿತು. ಇನ್ನೂ ಪ್ರವೇಶ ಪಡೆಯದ ಹಾಗೂ ಮಹತ್ತ್ವಪೂರ್ಣ ರಾಜ್ಯವೆಂದರೆ ಹೈದರಾಬಾದ್.

ಹೈದರಾಬಾದ್, ತನ್ನ ವಿಸ್ತಾರ, ಜನಸಂಖ್ಯೆ ಹಾಗೂ ಸಂಪನ್ಮೂಲಗಳ ದೃಷ್ಟಿಯಿಂದ ವಿಶಿಷ್ಟಸ್ಥಾನ ಪಡೆದಿದೆ ಮತ್ತು ಅದಕ್ಕೆ ಅದರದೇ ಆದ ವಿಶಿಷ್ಟ ಸಮಸ್ಯೆಗಳಿವೆ. ಅಲ್ಲಿಯ ನಿಜಾಮರಿಗೆ ಪಾಕಿಸ್ತಾನಕ್ಕೆ ಸೇರುವ ಉದ್ದೇಶವಿಲ್ಲವಾದರೂ ಭಾರತಕ್ಕೆ ಸೇರುವ ಕುರಿತು ಈವರೆಗೆ ಯೋಚಿಸಿಲ್ಲ. ಆದರೂ ತಮ್ಮ ರಾಜ್ಯದ ಸುತ್ತಲಿನ ಪ್ರದೇಶಗಳಿಗೆ ಸಂಬಂಧಿಸಿದಂತೆ ಮೂರು ಅತ್ಯವಶ್ಯ ವಿಷಯಗಳಾದ ವಿದೇಶಾಂಗ ವ್ಯವಹಾರ, ರಕ್ಷಣೆ ಹಾಗೂ ಸಂಪರ್ಕ ಇವುಗಳ ಸಂಬಂಧದಲ್ಲಿ ಸಹಕಾರ ನೀಡುವ ಬಗ್ಗೆ ನನಗೆ ಭರವಸೆ ನೀಡಿದ್ದಾರೆ. ಸರ್ಕಾರದ ಒಪ್ಪಿಗೆ ಪಡೆದು ನಿಜಾಮರೊಂದಿಗೆ ಮಾತುಕತೆ ಮುಂದುವರಿಸಲಾಗುತ್ತದೆ ಮತ್ತು ನಾವು ಎಲ್ಲರಿಗೂ ತೃಪ್ತಿಕರವೆನಿಸುವ ಪರಿಹಾರ ಕಂಡುಹಿಡಿಯುವ ನಂಬಿಕೆ ನನಗಿದೆ.

ಇಂದಿನಿಂದ ನಾನು ನಿಮ್ಮ ಸಂವಿಧಾನಬದ್ಧ ಗವರ್ನರ್–ಜನರಲ್ ಆಗಿದ್ದು, ನನ್ನನ್ನು ನಿಮ್ಮಲ್ಲಿ ಒಬ್ಬನನ್ನಾಗಿ ಮತ್ತು ಭಾರತದ ಹಿತಾಸಕ್ತಿಯ ನೆರವೇರಿಕೆಗೆ ಸಂಪೂರ್ಣವಾಗಿ ಬದ್ಧನಾಗಿರುವವನನ್ನಾಗಿ ಪರಿಗಣಿಸಬೇಕೆಂದು ಕೋರುತ್ತೇನೆ. ನಿಮ್ಮ ಗವರ್ನರ್–ಜನರಲ್ ಆಗಿ ಇರಬೇಕೆಂದು ನಿಮ್ಮ ನಾಯಕರು ನನಗೆ ನೀಡಿದ ಆಮಂತ್ರಣಕ್ಕೆ ನೀವು ಒಪ್ಪಿಗೆ ನೀಡಿ ನನ್ನನ್ನು ಗೌರವಿಸಿದ್ದೀರಿ. ನಿಮ್ಮ ಆಮಂತ್ರಣವನ್ನು ಒಪ್ಪಿಕೊಳ್ಳಲು ನನಗಿದ್ದ ಒಂದೇ ಕಾರಣವೆಂದರೆ ಈಗ ತತ್‌ಕ್ಷಣದಲ್ಲಿ ನಿಮ್ಮ ಮುಂದಿರುವ ಕಷ್ಟದ ದಿನಗಳಲ್ಲಿ ನನ್ನ ಸಹಾಯವನ್ನು ಮುಂದುವರಿಸಬಹುದೆಂಬುದು. ಭಾರತ ಸ್ವಾತಂತ್ರ್ಯ ಅಧಿನಿಯಮದ ಕರಡನ್ನು ಚರ್ಚಿಸುತ್ತಿದ್ದಾಗ ನಿಮ್ಮ ನಾಯಕರು ಮಧ್ಯಾಂತರ ಅವಧಿಯ ಅಂತ್ಯ ಎಂದು ೧೯೪೮ರ ಮಾರ್ಚ್ ३೧ನೇ ದಿನಾಂಕವನ್ನು ಆಯ್ಕೆ ಮಾಡಿದರು. ಏಪ್ರಿಲ್‌ನಲ್ಲಿ ನನ್ನನ್ನು ಬಿಟ್ಟುಕೊಡುವಂತೆ ಕೇಳಲು ಉದ್ದೇಶಿಸಿದ್ದೇನೆ. ನಿಮ್ಮ ಸೇವೆಯಲ್ಲಿ ತೊಡಗಿಕೊಂಡಿರಲು ನನ್ನನ್ನು ಆಮಂತ್ರಿಸುವ ಮೂಲಕ ಗೌರವ ತೋರಿಸಿರುವುದರ ಬಗ್ಗೆ ನಾನು ಮೆಚ್ಚುಗೆ ತೋರಿಸುವುದಿಲ್ಲವೆಂದರ್ಥವಲ್ಲ. ಆದರೆ ಸಾಧ್ಯವಾದಷ್ಟು ಬೇಗ, ನಿಮ್ಮಲ್ಲೊಬ್ಬರನ್ನು ಗವರ್ನರ್–ಜನರಲ್ ಆಗಿ ಪಡೆಯುವ ಸ್ವಾತಂತ್ರ್ಯ ನಿಮಗಿರಬೇಕೆಂದು ನನ್ನ ಭಾವನೆ. ಅಲ್ಲಿಯ ವರೆಗೆ ನಿಮ್ಮೊಂದಿಗೆ ನಿಮ್ಮ ನಡುವೆ ಇದ್ದು ಕೆಲಸ ಮಾಡುವುದು ನನಗೆ ದೊರೆತ ವಿಶೇಷ ಅವಕಾಶವೆಂದು ನಾನು ಮತ್ತು ನನ್ನ ಪತ್ನಿ ಭಾವಿಸುತ್ತೇವೆ. ನೀವು ಎಲ್ಲ ಸಮಯಗಳಲ್ಲೂ ನಮಗೆ ತೋರಿಸಿದ ಸಾಮರಸ್ಯ ಮನೋಭಾವ ಸಹಕಾರ ಸಹಾನುಭೂತಿ ಹಾಗೂ ಔದಾರ್ಯದ ಬಗ್ಗೆ ಕೃತಜ್ಞತೆ ತಿಳಿಸಲು ಶಬ್ದಗಳೇ ಇಲ್ಲ.

ನನ್ನ ಸರ್ಕಾರವು (ಹಾಗೆ ಹೇಳಲು ಈಗ ನನಗೆ ಸಾಂವಿಧಾನಿಕವಾಗಿ ಹಕ್ಕು ಬಂದಿದೆ ಹಾಗೂ ಆ ಬಗ್ಗೆ ನನಗೆ ಹೆಮ್ಮೆ ಎನಿಸುತ್ತದೆ) ಕ್ಷಮಾದಾನದ ಉದಾತ್ತ ಕಾರ್ಯಕ್ರಮದ ಮೂಲಕ ಈ ಸಂದರ್ಭವನ್ನು ಗಮನಾರ್ಹಗೊಳಿಸಲು ತೀರ್ಮಾನಿಸಿದೆ ಎಂದೂ ತಿಳಿಸಲು ಸಂತೋಷವೆನಿಸುತ್ತದೆ. ಸಾರ್ವಜನಿಕ ನೈತಿಕತೆ

ಹಾಗೂ ಸುರಕ್ಷರತೆಯನ್ನು ಮುಖ್ಯವಾಗಿ ಪರಿಗಣಿಸಿ, ರಾಜಕೀಯ ಉದ್ದೇಶಗಳಿಗೆ ವಿಶೇಷ ಪರಿಗಣನೆ ನೀಡುವ ಮೂಲಕ ಈ ಅಂಶವನ್ನು ವರ್ಗೀಕರಿಸಲಾಗಿದೆ. ನ್ಯಾಯಾಸ್ಥಾನ ವಿಚಾರಣೆಯ ಮೂಲಕ ಶಿಕ್ಷೆ ಅನುಭವಿಸುತ್ತಿರುವ ಮಿಲಿಟರಿ ಕೈದಿಗಳ ಬಿಡುಗಡೆಯೂ ಈ ಕಾರ್ಯನೀತಿಯಲ್ಲಿ ಸೇರುತ್ತದೆ.

ನಿಮ್ಮ ಮುಂದೆ ಅಗಾಧ ಕೆಲಸಗಳಿವೆ. ಎರಡು ವರ್ಷಗಳ ಹಿಂದಷ್ಟೇ ಯುದ್ಧ ಮುಗಿದಿದೆ. ವಾಸ್ತವವಾಗಿ ಎರಡು ವರ್ಷಗಳ ಹಿಂದೆ ಇದೇ ದಿನದಂದು ನಾನು ಭಾರತದ ಪರಮ ಸ್ನೇಹಿತನ ಜೊತೆಗಿದ್ದೆ. ಆ್ಯಟ್ಲೆಯವರು ತಮ್ಮ ಕ್ಯಾಬಿನೆಟ್ ಕೋಣೆಯಲ್ಲಿದ್ದಾಗ ಜಪಾನ್ ಶರಣಾಗಿದೆ ಎಂಬ ಸುದ್ದಿ ಬಂತು. ಅದು ಕೃತಜ್ಞತೆ ಹಾಗೂ ಸಡಗರದ ಕ್ಷಣವಾಗಿತ್ತು. ಏಕೆಂದರೆ, ಅದರೊಂದಿಗೆ ನಾಶ ಹಾಗೂ ಹತ್ಯೆಯ ಆರು ಕಟುವರ್ಷಗಳು ಕೊನೆಗೊಂಡಿದ್ದುವು. ಆದರೆ ಭಾರತದಲ್ಲಿ ನಮ್ಮ ಸಾಧನೆ ಮಹತ್ತರವಾಗಿದ್ದು ಅದನ್ನು ಯುದ್ಧರಹಿತ ಶಾಂತಿಯ ಒಡಂಬಡಿಕೆ ಎಂದು ಬಣ್ಣಿಸಲಾಗುತ್ತದೆ. ಯುದ್ಧದ ಅನಂತರದ ದುಷ್ಪರಿಣಾಮಗಳು ಈಗಲೂ ಪ್ರಪಂಚದ ತುಂಬ ಎದ್ದು ಕಾಣುತ್ತಿವೆ. ಆಗ್ನೇಯ ಏಷ್ಯಾದಲ್ಲಿ ನನ್ನ ಅನುಭವದಿಂದ ನಾನೇ ಹೇಳಬಹುದಾದರೆ ಇಂಥ ಸಾಹಸಮಯ ಪಾತ್ರ ವಹಿಸಿದ ಭಾರತ ಆರ್ಥಿಕ ಅಸ್ಥಿರತೆ ಅನುಭವಿಸಬೇಕಾಯಿತು. ನನ್ನ ಒಡನಾಡಿಗಳೆಂದು ನಾನು ಹೆಮ್ಮೆಯಿಂದ ಹೇಳಬಹುದಾದ ವೀರರ ಪ್ರಾಣಗಳ ಬೆಲೆ ತೆರಬೇಕಾಯಿತು. ರಾಜಕೀಯ ಸಮಸ್ಯೆಗಳಿಂದಾಗಿ ಸುಧಾರಣೆ ಕುಂಠಿತವಾಯಿತು ಇನ್ನು ಮುಂದೆ ಜನರಿಗೆ ಸಂತೋಷ ಹಾಗೂ ಪ್ರಗತಿಯ ಭರವಸೆ ನೀಡಿ, ಬಟ್ಟೆ ಹಾಗೂ ಇತರ ಅತ್ಯಾವಶ್ಯಕ ವಸ್ತುಗಳ ಕೊರತೆ ನೀಗಿಸಿ, ಸಂತುಲಿತ ಆರ್ಥಿಕ ಸ್ಥಿತಿಯನ್ನು ನೀವು ನಿರ್ಮಿಸಬೇಕಾಗಿದೆ. ಈ ಸಮಸ್ಯೆಗಳ ಪರಿಹಾರಕ್ಕೆ ಮನಃಪೂರ್ವಕ ಪ್ರಯತ್ನ, ದೂರದರ್ಶಿ ಯೋಜನೆ ಅಗತ್ಯ ಆದರೆ ನಿಮ್ಮಲ್ಲಿರುವ ಸಾಮಗ್ರಿ, ನಾಯಕತ್ವ ಹಾಗೂ ಮಾನವ ಸಂಪನ್ಮೂಲದ ಸಹಾಯದಿಂದ ನೀವು ಕಾರ್ಯಸಾಧನೆ ಮಾಡಿ ತೋರಿಸಬಲ್ಲಿರೆಂದು ನಂಬಿಕೆ ನನಗಿದೆ.

ಭಾರತದ ಆಗುಹೋಗುಗಳು ಕೇವಲ ರಾಷ್ಟ್ರೀಯ ಹಿತಾಸಕ್ತಿಗೆ ಸೀಮಿತವಾಗಿಲ್ಲ ಸ್ಥಿರ ಹಾಗೂ ಪ್ರಗತಿಪರ ರಾಷ್ಟ್ರವೊಂದರ ಉದಯವಾಗಿರುವುದು ವಿಶ್ವಶಾಂತಿಯಂಥ ಅಂತಾರಾಷ್ಟ್ರೀಯ ಮಹತ್ತ್ವಪೂರ್ಣ ಅಂಶಕ್ಕೆ ದಾರಿ ಮಾಡಿಕೊಡುತ್ತದೆ. ಇಲ್ಲಿನ ಸಾಮಾಜಿಕ ಆರ್ಥಿಕ ಬೆಳವಣಿಗೆ, ಕಾರ್ಯತಂತ್ರ, ಸಂಪನ್ಮೂಲಗಳಿಂದಾಗಿ ಇಲ್ಲಿ ನಡೆಯುವ ಕೆಲಸಗಳು ಬಹಳ ಮಹತ್ತ್ವಪೂರ್ಣವೆನಿಸುತ್ತವೆ. ಈ ಕಾರಣಕ್ಕಾಗಿಯೇ ಗ್ರೇಟ್ ಬ್ರಿಟನ್ ಹಾಗೂ ಅದರ ಆಧಿಪತ್ಯಗಳಷ್ಟೆ ಅಲ್ಲದೇ ವಿಶ್ವದ ಮಹತ್ತ್ವಪೂರ್ಣ ರಾಷ್ಟ್ರಗಳು ಭಾರತದ ಭವಿಷ್ಯದ ಬಗ್ಗೆ ಬಹಳ ನಿರೀಕ್ಷೆ ಇರಿಸಿಕೊಂಡಿದ್ದು, ಅದು ಪ್ರಗತಿ ಹಾಗೂ ಯಶಸ್ಸು ಪಡೆಯಲಿ ಎಂದು ಹಾರೈಸುತ್ತವೆ.

ಈ ಐತಿಹಾಸಿಕ ಕ್ಷಣದಲ್ಲಿ ಅಹಿಂಸೆಯಿಂದ ಸ್ವಾತಂತ್ರ್ಯ ತಂದುಕೊಟ್ಟ ಮಹಾತ್ಮ ಗಾಂಧಿಯಂಥ ರೂವಾರಿಗೆ ಭಾರತ ಋಣಿಯಾಗಿರಬೇಕೆಂಬ ಅಂಶವನ್ನು ನಾವು ಮರೆಯುವಂತಿಲ್ಲ. ಈ ದಿನ ಅವರು ಇಲ್ಲಿ ಇಲ್ಲ, ಅವರು ನಮ್ಮ ಮನಸ್ಸಿನಲ್ಲಿ ಅಚ್ಚೊತ್ತಿರುವುದು ನಮ್ಮ ಅರಿವಿಗೆ ಬರುತ್ತದೆ.

ಮಾನ್ಯ ಸಭಾಧ್ಯಕ್ಷರೆ, ನಿಮ್ಮೆಲ್ಲರ ಅಖಂಡ ಬೆಂಬಲ ಹಾಗೂ ಸಹಕಾರ ನನಗೆಷ್ಟು ಮೆಚ್ಚುಗೆಯಾಗಿದೆ ಎಂಬುದು ನಿಮಗೆ ಹಾಗೂ ನಮ್ಮ ಮುಂದಿನ ಸರ್ಕಾರದ ಸಹೋದ್ಯೋಗಿಗಳ ಅರಿವಿಗೆ ಬಂದಿರಬೇಕು.

ನಿಮ್ಮ ಮೊದಲ ಪ್ರಧಾನಿ ಪಂಡಿತ ಜವಾಹರಲಾಲ್ ನೆಹರು, ಧೈರ್ಯ ಹಾಗೂ ದೂರದೃಷ್ಟಿಯುಳ್ಳ ವಿಶ್ವವಿಖ್ಯಾತ ನಾಯಕ. (ಹರ್ಷೋದ್ಗಾರ). ನನ್ನ ಕೆಲಸದಲ್ಲಿ ಅವರು ನನಗೆ ತೋರಿದ ವಿಶ್ವಾಸ ಹಾಗೂ ಸ್ನೇಹ, ಅಳತೆಗೆ ನಿಲುಕದು. ಅವರ ಸಮರ್ಥ ಮಾರ್ಗದರ್ಶನ, ಅವರು ಆಯ್ದುಕೊಂಡಿರುವ ಸಹೋದ್ಯೋಗಿಗಳ ಸಹಾಯ, ಜನತೆಯ ಸಹಕಾರದಿಂದ ಭಾರತ ಬಲಯುತವಾದ ಪ್ರಭಾವಪೂರ್ಣ ಸ್ಥಾನ ಪಡೆದು ಇತರ ರಾಷ್ಟ್ರಗಳ ನಡುವೆ ಸೂಕ್ತ ಸ್ಥಾನ ಪಡೆಯುತ್ತದೆ.

**ಮಾನ್ಯ ಸಭಾಧ್ಯಕ್ಷರು :** *[ಘನತೆವೆತ್ತ ಗವರ್ನರ್–ಜನರಲ್ ಹಾಗೂ ಸಭೆಯ ಸದಸ್ಯರೇ ಚಕ್ರವರ್ತಿಗಳು ದಯೆಯಿಟ್ಟು ಕಳಿಸಿದ ಸಂದೇಶಕ್ಕಾಗಿ ಈ ಸಭೆಯು ಅವರಿಗೆ ಧನ್ಯವಾದಗಳನ್ನು ತಿಳಿಸಬೇಕೆಂದು ವಿನಂತಿಸುತ್ತೇನೆ.

ಇಂದು ನಾವು ಕೈಗೆತ್ತಿಕೊಂಡಿರುವ ಕೆಲಸದಲ್ಲಿ ಅವರ ಸಹಾನುಭೂತಿ ಹಾಗೂ ದಯೆ ಇರುವುದೆಂಬ ಅರಿವಿದೆ ಹಾಗೂ ಈ ಕಾರ್ಯವನ್ನು ನಾವು ಸರಿಯಾದ ರೀತಿಯಲ್ಲಿ ಸಾಧಿಸಲು ಸಮರ್ಥರಾಗಿದ್ದೇವೆಂಬ ಭರವಸೆ ಇದೆ.]*

ಅಧ್ಯಕ್ಷರು ಹಿಂದುಸ್ತಾನಿಯಲ್ಲಿ ಭಾಷಣ ಮಾಡಿದ್ದು ಅದರ ಪೂರ್ಣಪಾಠವನ್ನು ಚರ್ಚೆಗಳ ಹಿಂದೂಸ್ತಾನಿ ಪ್ರಕಟಣೆಯಲ್ಲಿ ಪ್ರಕಟಿಸಲಾಗಿದೆ.

**ಹೆಚ್ಚುವರಿ ಸಂದೇಶಗಳು:**

**ಮಾನ್ಯ ಸಭಾಧ್ಯಕ್ಷರು :** ಫ್ರೆಂಚ್ ವಿದೇಶಾಂಗ ಮಂತ್ರಿ ಎಂ.ಗಿರೌಡ್, ತಮ್ಮ ಹಾಗೂ ಫ್ರಾನ್ಸ್ ಸರ್ಕಾರದ ಪರವಾಗಿ ತಿಳಿಸಿದ ಅಭಿನಂದನೆಯ ಸಂದೇಶ ಬಂದಿದೆಯೆಂದು ನಿಮಗೆ ತಿಳಿಸಬಯಸುತ್ತೇನೆ. ಆದರೆ ಸಂದೇಶದ ಪಾಠ ನನಗೆ ಲಭ್ಯವಾಗಿಲ್ಲ ಎಂದು ತಿಳಿಯಲು ವಿಷಾದಿಸುತ್ತೇನೆ, ಆದರೆ ನಾನು ಈ ದಿನ, ಮೊದಲು ಓದಿದ ಸಂದೇಶಗಳೊಂದಿಗೆ ಅದನ್ನು ಸಭೆಯ ದಾಖಲೆಗಳಲ್ಲಿ ಬರೆದಿಡಲಾಗುತ್ತದೆ.

ಘನತೆವೆತ್ತ ಗವರ್ನರ್–ಜನರಲ್ ಅವರು ಚಕ್ರವರ್ತಿಗಳು ಔದಾರ್ಯದಿಂದ ಕಳಿಸಿದ ಸಂದೇಶಕ್ಕೆ ಪ್ರತಿಯಾಗಿ ಈ ಸದನದ ಕೃತಜ್ಞತೆಯ ಸಂದೇಶವನ್ನು ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ. ಮಹತ್ಕಾರ್ಯಕ್ಕೆ ಅವರ ಸಂದೇಶವು ಸ್ಫೂರ್ತಿದಾಯಕ ವಾಗುತ್ತದೆ. ವಿಭಿನ್ನ ಪ್ರಕಾರದ ಗ್ರೇಟ್ ಬ್ರಿಟನ್‌ನೊಂದಿಗೆ ಸ್ನೇಹ ಬೆಳೆಸುವ ಅವಕಾಶಕ್ಕಾಗಿ ನಾವು ಎದುರು ನೋಡುತ್ತೇವೆ. ಚಕ್ರವರ್ತಿಗಳು ಭಾರತಕ್ಕೆ ತೋರಿದ ಆಸಕ್ತಿ ಸಹಾನುಭೂತಿ ಹಾಗೂ ಸೌಜನ್ಯ ಹಾಗೇ ಮುಂದುವರಿಯುವುದೆಂದು ಮತ್ತು ನಾವು ಅದಕ್ಕೆ ಪಾತ್ರರಾಗಿರುತ್ತೇವೆಂದು ನಾನು ನಂಬಿದ್ದೇನೆ.

**೧೦. ಫ್ರೆಂಚ್ ವಿದೇಶಾಂಗ ವ್ಯವಹಾರಗಳ ಸಚಿವರಿಂದ ಸಂದೇಶ:**

ಮಾನ್ಯ ಜಾರ್ಜ್ ಬಿಡಾಲ್ಟ್

ವಿದೇಶ ವ್ಯವಹಾರಗಳ ಸಚಿವರು

ಪ್ಯಾರಿಸ್

ಪಂಡಿತ್ ಜವಾಹರ್‌ಲಾಲ್ ನೆಹರು ಅವರಿಗೆ,

ಈ ಐತಿಹಾಸಿಕ ದಿನದಂದು ನನ್ನ ಸರ್ಕಾರದ ಹೆಸರಿನಲ್ಲಿ ಹಾಗೂ ನನ್ನ ಪರವಾಗಿ ವಂದನೆಗಳು. ವಿಶ್ವದ ಸ್ವತಂತ್ರ, ಬೃಹತ್ ರಾಷ್ಟ್ರಗಳ ಪಟ್ಟಿಗೆ ಅಂತಿಮವಾಗಿ ಸೇರ್ಪಡೆಯಾಗಿರುವ ಭಾರತವು, ವಿಶ್ವಶಾಂತಿಗೆ ಬದ್ಧವಾಗಿದ್ದು ಮನುಕುಲದ ಅಭ್ಯುದಯವನ್ನು ಬಯಸುತ್ತದೆ. ಘನತೆವೆತ್ತ ಮಾನ್ಯರೆ, ಈ ಸಂದರ್ಭದಲ್ಲಿ ನಮ್ಮ ಎರಡೂ ದೇಶಗಳ ನಡುವಣ ಸ್ನೇಹ ಕುರಿತು ನನಗಿರುವ ವಿಶೇಷ ಪರಿಗಣನೆ ಹಾಗೂ ಆದರವನ್ನು ಕುರಿತು ನಾನು ನೀಡುತ್ತಿರುವ ಭರವಸೆಯನ್ನು ಅಂಗೀಕರಿಸಬೇಕೆಂದು ವಿನಂತಿಸುತ್ತೇವೆ.

ಅಮೆರಿಕ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷರ ಸಂದೇಶ:

ಅಮೆರಿಕ ರಾಯಭಾರ ಕಚೇರಿ

ನವದೆಹಲಿ, ಭಾರತ

ಆಗಸ್ಟ್ ೧೫, ೧೯೪೭

ಘನತೆವೆತ್ತ ಮಾನ್ಯರೆ,

ಅಮೆರಿಕ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷರ ಈ ಮುಂದಿನ ಸಂದೇಶವನ್ನು ನಿಮಗೆ ತಿಳಿಸುವ ಗೌರವಯುತ ಅವಕಾಶ ನನಗೆ ದೊರಕಿದೆ.

ಈ ಸ್ಮರಣಾರ್ಹ ಸಂದರ್ಭದಲ್ಲಿ ನಾನು ನಿಮಗೆ, ಪ್ರಧಾನಿ ಜವಾಹರಲಾಲ್ ನೆಹರುಗೆ, ಹಾಗೂ

ಭಾರತ ದೇಶದ ಜನತೆಗೆ ಅಮೆರಿಕ ಸಂಯುಕ್ತ ಸಂಸ್ಥಾನಗಳ ಸರ್ಕಾರ ಹಾಗೂ ಜನತೆಯ ಹಾರ್ದಿಕ ಶುಭಾಶಯಗಳನ್ನು ತಿಳಿಸುತ್ತಿದ್ದೇನೆ. ಹೊಸ ಹಾಗೂ ಉನ್ನತ ಸ್ಥಾನ ಪಡೆದ ಭಾರತವನ್ನು ಸ್ವತಂತ್ರ ಸಾರ್ವಭೌಮ ರಾಷ್ಟ್ರಗಳ ವಿಶ್ವಸಮುದಾಯಕ್ಕೆ ಸ್ವಾಗತಿಸುತ್ತೇವೆ. ನಮ್ಮ ಸ್ನೇಹ ಸದಿಚ್ಛೆ ಮುಂದುವರಿಯುವ ಬಗ್ಗೆ ಈ ಹೊಸ ರಾಷ್ಟ್ರಕ್ಕೆ ಭರವಸೆ ನೀಡುತ್ತೇವೆ. ವಿಶ್ವಶಾಂತಿ ಹಾಗೂ ಜನರ ಮುನ್ನಡೆಗಾಗಿ ತನ್ನನ್ನು ಮೀಸಲಿಟ್ಟುಕೊಂಡಿರುವ ಭಾರತವು ಪರಸ್ಪರ ನಂಬಿಕೆ ಹಾಗೂ ವಿಶ್ವಾಸದ ಬುನಾದಿಯ ಮೇಲೆ ವಿಶ್ವ ಸಮಾಜ ನಿರ್ಮಿಸುವ ಹೋರಾಟದಲ್ಲಿ ವಿಶ್ವದ ರಾಷ್ಟ್ರಗಳ ಮುಂಚೂಣಿಯಲ್ಲಿ ಇರುವುದೆಂಬ ನಮ್ಮ ನಂಬಿಕೆಯನ್ನು ಮತ್ತೆ ದೃಢ ಪಡಿಸುತ್ತೇವೆ. ಭಾರತದ ಮುಂದೆ ಗಂಭೀರ ಸಮಸ್ಯೆಗಳಿವೆ. ಆದರೆ ಸಂಪನ್ಮೂಲವೂ ಹೇರಳವಾಗಿದೆ. ಅಗರ ಮುಂದಿರುವ ಸಮಸ್ಯೆಗೆ ಜನತೆ ಹಾಗೂ ನಾಯಕರು ಸಮಬಲರಾಗಿದ್ದಾರೆ ಎಂಬ ನಂಬಿಕೆ ನನಗಿದೆ, ಮುಂಬರುವ ವರ್ಷಗಳಲ್ಲಿ ಈ ಹೊಸ ರಾಷ್ಟ್ರದ ಜನರಿಗೆ ಅಮೆರಿಕ ಒಬ್ಬ ಖಾಯಂ ಸ್ನೇಹಿತನಾಗಿ ಪರಿಣಮಿಸುತ್ತದೆ. ನಮ್ಮ ನಡುವಿನ ಸ್ನೇಹವು ಹಿಂದಿನಂತೆಯೇ ಮುಂದೆಯೂ ಕೂಡ ನಿಕಟವಾಗಿದ್ದು, ಅಂತಾರಾಷ್ಟ್ರೀಯ ಕೆಲಸಕಾರ್ಯಗಳಲ್ಲಿ ಎರಡೂ ದೇಶಗಳ ನಡುವೆ ಫಲಪ್ರದ ಸಹಕಾರ ಹಾಗೂ ಸೌಹಾರ್ದಯುತ ಸಂಬಂಧ ವ್ಯಕ್ತವಾಗುತ್ತದೆ ಎಂದು ಆಶಿಸುತ್ತೇನೆ.

ಘನತೆವೆತ್ತ ನೀವು ಭಾರತ ದೇಶದ ಗವರ್ನರ್–ಜನರಲ್ ಹುದ್ದೆಯನ್ನು ಧಾರಣ ಮಾಡಿರುವುದಕ್ಕಾಗಿ ನಿಮಗೆ ವೈಯಕ್ತಿಕವಾಗಿ ಅಭಿನಂದನೆ ತಿಳಿಸಲು ಇಚ್ಛಿಸುತ್ತೇನೆ. ಹಾಗೂ ನಾನು ಹೆಚ್ಚಿನ ಪ್ರಾಮುಖ್ಯ ನೀಡುತ್ತೇನೆಂಬ ಭರವಸೆ ಕೊಡುತ್ತೇನೆ.

ಹೆನ್ರಿ ಟಿ. ಗ್ರೇಡಿ

ಘನತೆವೆತ್ತ ಭಾರತ ಆಧಿಪತ್ಯದ ಗವರ್ನರ್–ಜನರಲ್‌ರಿಗೆ

**ಮಾನ್ಯ ಸಭಾಧ್ಯಕ್ಷರು :** ನಮ್ಮ ದೇಶದ ಆಡಳಿತಕ್ಕಾಗಿ ಅಧಿಕಾರ ವಹಿಸಿಕೊಳ್ಳುತ್ತಿರುವ ನಮ್ಮ ಇತಿಹಾಸದ ಪರಿಣಾಮಕಾರಿ ಘಳಿಗೆಯೆನಿಸುವ ಈ ಹೊತ್ತಿನಲ್ಲಿ ನಾವು, ಇಂದು ಪಡೆದ ಸ್ವಾತಂತ್ರ್ಯವನ್ನು ಗಳಿಸುವುದಕ್ಕಾಗಿ ಶ್ರಮವಹಿಸಿದ, ಕಷ್ಟ ಅನುಭವಿಸಿದವರ ಸೇವೆ ಹಾಗೂ ಬಲಿದಾನವನ್ನು ಕೃತಜ್ಞತೆಯಿಂದ ಸ್ಮರಿಸೋಣ, ಈ ಐತಿಹಾಸಿಕ ಸಂದರ್ಭದಲ್ಲಿ ನಾವು ನಮ್ಮ ಆಧುನಿಕ ಇತಿಹಾಸದ ರೂವಾರಿಯಾದ, ಪರೀಕ್ಷೆ ಹಾಗೂ ಕ್ಲೇಶಗಳಿಂದ ಕೂಡಿದ ಈ ಎಲ್ಲ ವರ್ಷಗಳುದ್ದಕ್ಕೂ ನಮಗೆ ಪ್ರೇರಣೆ ಹಾಗೂ ಮಾರ್ಗದರ್ಶನ ನೀಡಿದ ಸಾಧಿಸದೆ ಉಳಿದಿರುವುದನ್ನು ಪೂರ್ಣಗೊಳಿಸಲು ತನ್ನದೇ ಆದ ರೀತಿಯಲ್ಲಿ ಈ ವಯಸ್ಸಿನಲ್ಲೂ ದುಡಿಯುತ್ತಿರುವ ಮಹಾತ್ಮ ಗಾಂಧಿಗೆ ನಮ್ಮ ಗೌರವಪೂರ್ಣ ನಮನ ಸಲ್ಲಿಸೋಣ.

ನಮ್ಮ ಸಂಕಷ್ಟ ಹಾಗೂ ಬಲಿದಾನಗಳ ಪ್ರತಿಫಲವಾದ ಈ ಸಾಧನೆ ಕಡಿಮೆಯದೇನಲ್ಲ ಎಂಬುದನ್ನು ಕೃತಜ್ಞತೆಯಿಂದ ಸ್ಮರಿಸಲೇಬೇಕು ಅಲ್ಲದೆ ವಿಶ್ವದ ಶಕ್ತಿಗಳು ಹಾಗೂ ಘಟನೆಗಳೂ ಈ ಫಲಿತಾಂಶಕ್ಕೆ ಕಾರಣವಾಗಿದೆ. ಕಡೆಯದಾದರೂ ಕನಿಷ್ಠವಲ್ಲದಿರುವ ಇನ್ನೊಂದು ಕೊಡುಗೆ ಎಂದರೆ ಬ್ರಿಟಿಷ್ ಜನಾಂಗದ ಐತಿಹಾಸಿಕ ಸಂಪ್ರದಾಯಗಳು ಹಾಗೂ ಪ್ರಜಾಸತ್ತಾತ್ಮಕ ಆದರ್ಶಗಳ ನೆರವೇರಿಕೆ. ದೂರದೃಷ್ಟಿಯುಳ್ಳ ಅಲ್ಲಿನ ನಾಯಕರು ಹಾಗೂ ರಾಜಕೀಯ ಧುರೀಣರು ದೂರದೃಷ್ಟಿಯಿಂದ ವಾಗ್ದಾನ ನೀಡಿದರು, ಅದು ಇಂದು ನೆರವೇರಿದೆ. ಆ ಜನಾಂಗದ ಪ್ರತಿನಿಧಿ ಬರ್ಮಾದ ವೈಕೌಂಟ್ ಮೌಂಟ್‌ಬ್ಯಾಟನ್ ಹಾಗೂ ಅವರ ಪತ್ನಿ ಇಂದು ನಮ್ಮೊಂದಿಗೆ ಉಪಸ್ಥಿತರಿರುವುದು ನಮಗೆಲ್ಲ ಆನಂದ ತಂದಿದೆ. ಈ ನಾಟಕದ ಕೊನೆಯ ದೃಶ್ಯಗಳಲ್ಲಿ ಇದನ್ನು ತರಲು ಅವರು ಬಹಳ ಶ್ರಮವಹಿಸಿದ್ದಾರೆ ಮತ್ತು ಮಹತ್ತ್ವದ ಪಾತ್ರ ವಹಿಸಿದ್ದಾರೆ. ಭಾರತ, ಬ್ರಿಟನ್ ಸಂಬಂಧ ಇನ್ನು ಮುಂದೆ ಸಮಾನತೆ, ಪರಸ್ಪರ ಸದ್ಭಾವನೆ ಹಾಗೂ ಲಾಭವನ್ನು ಆಧರಿಸಿರುತ್ತದೆ.

ಇದು ನಿಸ್ಸಂಶಯವಾಗಿಯೂ ಸಂಭ್ರಮಾಚರಣೆಯ ದಿನ. ಆದರೆ ಒಂದೇ ಒಂದು ವಿಚಾರವು

ಆನಂದದಾಯಕ ಆಚರಣೆಯ ಪೂರ್ಣತೆಗೆ ಧಕ್ಕೆಯುಂಟುಮಾಡಿದೆ. ಪರಮಾತ್ಮ ಹಾಗೂ ಪ್ರಕೃತಿಯ ಸಂಯೋಗದಿಂದ ಸೃಷ್ಟಿಗೊಂಡ ಭಾರತ, ಸಂಸ್ಕೃತಿ ಹಾಗೂ ಪರಂಪರೆ ಹಾಗೂ ಸಹಸ್ರಮಾನಗಳ ಇತಿಹಾಸದಲ್ಲೂ ಏಕಮೇವಾದ್ವಿ ಎಂದು ಪರಿಗಣಿತವಾಗಿದ್ದ ಭಾರತ ಇಂದು ಇಬ್ಭಾಗವಾಗಿದೆ. ಅವರಿಗೆ ಉತ್ಸಾಹ ಹಾಗೂ ಭರವಸೆಯ ಮಾತುಗಳನ್ನು ತಿಳಿಸೋಣ, ಭಯ ಹಾಗೂ ಹತಾಶೆಗೆ ಒಳಗಾಗದೆ ನೆರೆಯವರೊಂದಿಗೆ ನಂಬಿಕೆ ಹಾಗೂ ಧೈರ್ಯದಿಂದ ಶಾಂತಿಯುತವಾಗಿ ಬಾಳುವೆ ನಡೆಸುತ್ತ ನಿಷ್ಠಾವಂತ ನಾಗರಿಕನ ಕರ್ತವ್ಯಗಳನ್ನು ನೆರವೇರಿಸಿ ತಮ್ಮ ಹಕ್ಕಿನ ಸ್ಥಾನ ಪಡೆಯಬೇಕೆಂದು ತಿಳಿಸೋಣ. ಅಲ್ಲಿ ಇಂದು ಸ್ಥಾಪಿತವಾಗಿರುವ ಹೊಸ ದೇಶಕ್ಕೆ ಶುಭಾಶಯಗಳನ್ನು ಕಳಿಸಿ, ಆ ಪ್ರದೇಶದ ಆಳ್ವಿಕೆಯ ಹಾಗೂ ಅಲ್ಲಿಯ ನಾಗರಿಕರಿಗೆ ಸಂತೋಷ ಹಾಗೂ ಅಭ್ಯುದಯ ತಂದುಕೊಡುವ ಮಹತ್ಕಾರ್ಯಕ್ಕೆ ಶುಭ ಹಾರೈಸೋಣ. ಯಾವುದೇ ಭೇದ ಅಥವಾ ತಾರತಮ್ಯವಿಲ್ಲದೇ ಅವರನ್ನು ಗೌರವಯುತವಾಗಿ ಹಾಗೂ ನ್ಯಾಯಯುತವಾಗಿ ಪರಿಗಣಿಸಲಾಗುತ್ತದೆಂದು ಭರವಸೆ ತಾಳೋಣ. ಈ ವಿಭಜನೆಗೆ ಪಟ್ಟು ಹಿಡಿದು ಅದನ್ನು ಕಾರ್ಯಗತಗೊಳಿಸಿದವರೂ ಭಾರತದ ಅಖಂಡತ್ವದ ಬಗ್ಗೆ ಮನಗಾಣುವ ದಿನ ಬರುವುದೆಂದು ಮತ್ತು ನಾವೆಲ್ಲ ಮತ್ತೆ ಒಗ್ಗೂಡುತ್ತೇವೆ ಎಂದು ಆಶಿಸೋಣ ಮತ್ತು ಅದಕ್ಕಾಗಿ ಪ್ರಾರ್ಥಿಸೋಣ. ಇದೆಲ್ಲವನ್ನು ಬಲವಂತದಿಂದ ತರಲಾಗದು, ಅದಕ್ಕೆ ದೊಡ್ಡ ಮನಸ್ಸು ಸಹಕಾರ ಅಗತ್ಯ ಎಂಬ ಅರಿವು ನಮಗಿರಬೇಕು. ನಮ್ಮ ಈ ಕಡೆಯ ವ್ಯವಹಾರಗಳು, ಬೇರೆಯಾಗಿ ಹೋದವರನ್ನು ಆಕರ್ಷಿಸುವಂತಿರಬೇಕು. ಇದು ಕನಸೆಂದು ತೋರಬಹುದು. ಆದರೆ ವಿಭಜನೆಯನ್ನು ಬಯಸಿದವರ ಕನಸಿನಷ್ಟು ಭ್ರಾಮಕವಾಗಿಲ್ಲ. ಇವತ್ತು ನಾವು ಆಶಿಸಿದ್ದಕ್ಕಿಂತ ಬೇಗ ಅದು ಅರಿವಿಗೆ ಬರುತ್ತದೆ.

ಇಂದಿನ ದಿನ ಸಂಭ್ರಮಾಚರಣೆಯ ದಿನವಾಗಿರುವುದಕ್ಕಿಂತ ಹೆಚ್ಚಾಗಿ ನಮ್ಮ ಕನಸಿನ ಭಾರತವನ್ನು ಕಟ್ಟಲು ನಮ್ಮನ್ನು ನಾವು ಸಮರ್ಪಿಸಿಕೊಳ್ಳಬೇಕಾದ ದಿನ. ನಮ್ಮ ನೋಟವನ್ನು ಭೂತಕಾಲದಿಂದ ಕಿತ್ತು ಭವಿಷ್ಯದತ್ತ ನೆಲೆಗೊಳಿಸೋಣ. ನಮಗೆ ಬೇರೆ ರಾಜ್ಯಗಳೊಡನೆ ಯಾವುದೇ ಜಗಳವಿಲ್ಲ ಮತ್ತು ಬೇರೆ ಯಾವುದೇ ರಾಷ್ಟ್ರ ನಮ್ಮೊಂದಿಗೆ ಜಗಳ ಪ್ರಾರಂಭಿಸುವುದಿಲ್ಲವೆಂದು ಆಶಿಸೋಣ. ನಮ್ಮ ದೇಶದ ಇತಿಹಾಸ ಹಾಗೂ ಸಂಪ್ರದಾಯಗಳನ್ನು ಗಮನಿಸಿದರೆ ನಾವು ಶಾಂತಿಪ್ರಿಯರು. ಮತ್ತು ಭಾರತ ವಿಶ್ವದೊಂದಿಗೆ ಶಾಂತಿಯಿಂದಿರಲು ಬಯಸುತ್ತದೆ. ಭಾರತದ ಗಡಿಯಾಚೆಯ ಭಾರತ ಸಾಮ್ರಾಜ್ಯ ಇತರ ಸಾಮ್ರಾಜ್ಯಗಳಿಗಿಂತ ವಿಭಿನ್ನವಾದುದು. ಭಾರತದ ಗೆಲುವುಗಳು ಆಧ್ಯಾತ್ಮಿಕ ಗೆಲವುಗಳಾಗಿದ್ದು ಅವು ಇತರರನ್ನು ಗುಲಾಮಗಿರಿಯ ಕಬ್ಬಿಣದ ಅಥವಾ ಚಿನ್ನದ ಭಾರವಾದ ಸರಪಳಿಗಳಿಂದ ಕಟ್ಟಿಹಾಕಿಲ್ಲ. ಆದರೆ ಭಾರತವು ಬೇರೆ ಪ್ರದೇಶಗಳನ್ನು ಹಾಗೂ ಜನರನ್ನು ಸಂಸ್ಕೃತಿ, ನಾಗರಿಕತೆ, ಧರ್ಮ ಹಾಗೂ ಜ್ಞಾನ ಎಂಬ ಚಿನ್ನ, ರೇಷ್ಮೆಗಳಿಂದ ತನ್ನೊಂದಿಗೆ ಸೇರಿಸಿ ಗಟ್ಟಿ ಬಂಧುರವನ್ನು ರೂಪಿಸಿದೆ. ನಾವು ಅದೇ ಸಂಪ್ರದಾಯವನ್ನು ಅನುಸರಿಸೋಣ. ಅದರ ಹೊರತಾಗಿ ಬೇರೆ ಮಹತ್ವಾಕಾಂಕ್ಷೆ ಇಲ್ಲ. ನಾವು ವಿಜಯದೆಡೆ ಹೆಜ್ಜೆ ಹಾಕುವಂತೆ ಮಾಡಿ ಈ ವಿಶಿಷ್ಟ ಫಲಿತಾಂಶವನ್ನು ಸಾಧಿಸಿಕೊಟ್ಟ ಅಹಿಂಸೆಯ ದೊಡ್ಡ ಆಯುಧವನ್ನು ಯುದ್ಧ ಸಂತ್ರಸ್ತ ಜಗತ್ತಿಗೆ ಪ್ರಾಯೋಗಿಕವಾಗಿ ನೀಡಿ ಜಗತ್ತಿನಲ್ಲಿ ಶಾಂತಿ ಹಾಗೂ ಸ್ವಾತಂತ್ರ್ಯ ನಿರ್ಮಿಸುವ ಕಾರ್ಯದಲ್ಲಿ ಯಥಾಶಕ್ತಿ ಕೊಡುಗೆ ನೀಡೋಣ. ಭಾರತ ದೊಡ್ಡ ಪಾತ್ರ ವಹಿಸಬೇಕಾಗಿದೆ. ಭಾರತದ ಬದುಕು ಹಾಗೂ ಸಂಸ್ಕೃತಿಯಲ್ಲಿ ಮಿಡಿಯುತ್ತಿರುವ ಒಂದು ವಿಶಿಷ್ಟ ಅಂಶದ ಬಲದಿಂದ ಭಾರತವು ಕಾಲಕಾಲಕ್ಕಾದ ಆಕ್ರಮಣಗಳನ್ನು ತಾಳಿಕೊಂಡಿದೆ. ನಾವು ನಮ್ಮ ವ್ಯವಹಾರಗಳೊಂದಿಗೆ ನಮಗಿರುವ ಬದ್ಧತೆಯನ್ನು ರುಜುವಾತು ಪಡಿಸಿದರೆ ಮಾತ್ರ ಭರವಸೆಯಿಂದ ತುಂಬಿದ ಹೊಸ ಹುಟ್ಟನ್ನು ಕಾಣಬಲ್ಲೆವು.

ಈ ದೇಶದಲ್ಲಿ ಮುಂದಿನ ವಾತಾವರಣ ನಿರ್ಮಿಸಲು ಸಂಕಲ್ಪ ತೊಡೋಣ–ಇಲ್ಲಿ ಪ್ರತಿಯೊಬ್ಬ ವ್ಯಕ್ತಿ ಸ್ವತಂತ್ರನಾಗಿದ್ದು ಅವನ ಅಭಿವೃದ್ಧಿಗೆ ಸರ್ವಾಂಗೀಣ ಪ್ರಗತಿಗೆ ಅಗತ್ಯವಿರುವುದನ್ನೆಲ್ಲ ಕಲ್ಪಿಸಬೇಕು; ಬಡತನ ಅಸಹನೀಯತೆ, ಅಜ್ಞಾನ–ಅನಾರೋಗ್ಯ ನಿವಾರಣೆಯಾಗಬೇಕು; ಮೇಲುಸ್ತರ ಕೆಳಸ್ತರ, ಬಡತನ–ಸಿರಿತನ

ಎಂಬ ಭೇದ ತೊಲಗಬೇಕು. ಧರ್ಮಬೋಧೆ ಆಚರಣೆ ಮುಕ್ತವಾಗಿ ನಡೆಯಬೇಕು ಹಾಗೂ ಪರಸ್ಪರರ ಮಧ್ಯೆ ಬಾಂಧವ್ಯ ಕಲ್ಪಿಸುವ ಕೊಂಡಿಯಾಗಬೇಕೇ ಹೊರತು ಜನರನ್ನು ವಿಭಜಿಸಿ, ಪ್ರತ್ಯೇಕಿಸುವ ಉಪದ್ರವಕಾರಕ ಅಂಶವಾಗಬಾರದು, ಅಸ್ಪೃಶ್ಯತೆಯನ್ನು ಅಹಿತಕರ ಕನಸಿನಂತೆ ಮರೆಯಬೇಕು. ಒಬ್ಬ ವ್ಯಕ್ತಿಯಿಂದ ಇನ್ನೊಬ್ಬ ವ್ಯಕ್ತಿಯ ಶೋಷಣೆ ನಿಲ್ಲಬೇಕು; ಆದಿಮಜಾತಿಯವರು ಹಾಗೂ ಹಿಂದುಳಿದವರಿಗೂ ಎಲ್ಲ ಸೌಕರ್ಯ ಕಲ್ಪಿಸಿ ಅವರು ಇತರರಿಗೆ ಸರಿಸಮನಾಗುವಂತಾಗಬೇಕು, ಎಲ್ಲರಿಗೂ ಸಾಕಷ್ಟು ಆಹಾರ ದೊರೆತು, ಹಾಲಿನ ಹೊಳೆ ಹರಿಯುವಂತಾಗಬೇಕು. ಸ್ತ್ರೀ ಪುರುಷರು ನಗುನಗುತ್ತ ತಮಗೆ ಯೋಗ್ಯವೆನಿಸುವಂತೆ ಹೊಲಗಳಲ್ಲಿ, ಕಾರ್ಖಾನೆಗಳಲ್ಲಿ ದುಡಿಯುವಂತಾಗಬೇಕು. ಎಲ್ಲ ಗುಡಿಸಲುಗಳಲ್ಲಿ, ಕುಗ್ರಾಮಗಳಲ್ಲೂ ಗ್ರಾಮೀಣ ಕುಶಲಕಲೆಗಳ ಮಧುರಧ್ವನಿ ಕೇಳಿಬರುತ್ತಿದ್ದು, ಮಹಿಳೆಯರು ಹಾಡು ಗುಣಗುಣಿಸುತ್ತ ಆ ಕಲೆಗಳಲ್ಲಿ ತೊಡಗಿರಬೇಕು, ಸೂರ್ಯಚಂದ್ರರ ಬೆಳಕಿನಲ್ಲಿ ಮನಗಳು ಮುಖಗಳು ಸಂತೋಷದಿಂದ ಲಕಲಕಿಸಬೇಕು.

ಇದೆಲ್ಲ ಕಾರ್ಯರೂಪಕ್ಕೆ ಬರಬೇಕಾದರೆ ಆದರ್ಶವಾದ ಮತ್ತು ತ್ಯಾಗ, ಜಾಣ್ಮೆ ಮತ್ತು ಶ್ರದ್ಧೆ, ದೃಢತೆ ಮತ್ತು ಸಂಘಟನಾ ಸಾಮರ್ಥ್ಯ ಒಗ್ಗೂಡಬೇಕು. ನಮ್ಮ ದೇಶದಲ್ಲಿ ವಿವಿಧ ಪಕ್ಷಗಳು ಹಾಗೂ ಗುಂಪುಗಳು ಇವೆ. ಅವು ವಿಭಿನ್ನ ಆದರ್ಶ ಹಾಗೂ ವಿಚಾರಧಾರೆ ಹೊಂದಿವೆ. ತಮ್ಮ ದೃಷ್ಟಿಕೋನಕ್ಕೆ ಹೊಂದುವಂತೆ ತಮ್ಮ ವಿಚಾರಧಾರೆಗನುಗುಣವಾಗಿ ದೇಶವನ್ನು ಪರಿವರ್ತಿಸಲು, ಸಂವಿಧಾನವನ್ನು ರೂಪಿಸಲು ಆಡಳಿತವನ್ನು ನಡೆಸಲು ಪ್ರಯತ್ನಿಸುತ್ತಿವೆ. ಅದು ಅವರ ಹಕ್ಕು. ಆದರೆ ಅವರಿಂದ ನಿಷ್ಠೆಯನ್ನು ನಿರೀಕ್ಷಿಸುವುದು ರಾಷ್ಟ್ರದ ಹಕ್ಕು. ಇಂದು ಅಗತ್ಯವಿರುವುದು ರಚನಾತ್ಮಕ ಪ್ರಯತ್ನವೇ ಹೊರತು ಕಲಹವಲ್ಲ, ಪರಿಶ್ರಮ, ದುಡಿಮೆಯೇ ಹೊರತು ವಾದವಲ್ಲ ಎಂಬುದನ್ನು ಎಲ್ಲರೂ ಅರಿತುಕೊಳ್ಳಬೇಕಾಗಿದೆ. ರೈತನು ಹೆಚ್ಚು ಹೆಚ್ಚಾಗಿ ಬೆಳೆಯುವ ಮೂಲಕ, ಕಾರ್ಮಿಕರು ಹೆಚ್ಚು ಸರಕುಗಳನ್ನು ಉತ್ಪಾದಿಸುವ ಮೂಲಕ, ಉದ್ಯಮಿಗಳು ತಮ್ಮ ಜಾಣ್ಮೆ, ಚಾತುರ್ಯ, ಸಾಧನ–ಸಂಪತ್ತಿನ ಉಪಯೋಗ ಪಡೆಯುವ ಮೂಲಕ ಎಲ್ಲರ ಒಳಿತಿಗಾಗಿ ತಮ್ಮ ಕೊಡುಗೆ ಸಲ್ಲಿಸಲು ಸಿದ್ಧರಾಗಿರುವರೆಂದು ಆಶಿಸೋಣ. ಇದಕ್ಕಾಗಿ ನಾವು ಸಭ್ಯ ಹಾಗೂ ಆರೋಗ್ಯಪೂರ್ಣ ಬದುಕಿಗೆ ಅವಕಾಶ ಕಲ್ಪಿಸುವ ಬಗ್ಗೆ ತಮ್ಮನ್ನು ತಾವು ಸುಧಾರಣೆ ಮಾಡಿಕೊಳ್ಳಲು, ಅರಿತುಕೊಳ್ಳಲು ಅವಕಾಶವಿರುವ ಬಗ್ಗೆ ಭರವಸೆ ನೀಡಬೇಕು.

ನಮ್ಮ ಮುಂದಿರುವ ಗುರುತರ ಕೆಲಸಕ್ಕಾಗಿ ಜನರು ತಮ್ಮನ್ನು ತಾವು ಸಮರ್ಪಿಸಿಕೊಳ್ಳಬೇಕಲ್ಲವೇ? ಈವರೆಗೆ ಸಾಮಾನ್ಯರ ಜನಜೀವನವನ್ನು, ಆಳುವವರು ನಿಯಂತ್ರಿಸುವವರು ಆಗಿ ಕಾರ್ಯಮಾಡುತ್ತಿದ್ದವರು ಇನ್ನು ಮುಂದೆ ಜನಸೇವಕರಾಗಬೇಕಾಗಿದೆ.ನಮ್ಮ ಸೇನೆಯು ತನ್ನ ಧೈರ್ಯ ಹಾಗೂ ಹೋರಾಟದ ಸಾಮರ್ಥ್ಯದಿಂದಾಗಿ ದೂರದ ನಾಡುಗಳಲ್ಲಿ ಅಚ್ಚಳಿಯದ ಹೆಸರು ಮಾಡಿದೆ. ನಮ್ಮ ಭೂ–ಜಲ–ವಾಯುಪಡೆಗಳು ತಾವೀಗ ರಾಷ್ಟ್ರೀಯ ಸೇನೆಯಾಗಿ ರೂಪುಗೊಂಡಿದ್ದೇವೆಂದು ಹಾಗೂ ದೊರೆತಿರುವ ಸ್ವಾತಂತ್ರ್ಯವನ್ನು ರಕ್ಷಿಸುವುದಷ್ಟೇ ಅಲ್ಲದೆ ಹೊಸ ಜೀವನವನ್ನು ನಿರ್ಮಿಸುವಲ್ಲಿ ಕ್ರಿಯಾತ್ಮಕವಾಗಿ ಸಹಾಯಮಾಡುವ ಹೊಣೆಯೂ ತಮ್ಮ ಮೇಲಿದೆ ಎಂಬುದನ್ನು ಅರಿಯಬೇಕು. ನಮ್ಮ ದೇಶದ ಸಶಸ್ತ್ರಪಡೆಯಲ್ಲಿ ನಮ್ಮ ಜನರಿಗೆ ಮುಕ್ತ ಅವಕಾಶವಿದೆ. ಹೆಚ್ಚಿಗಿನ್ನೇನು, ಅವರು ತಮ್ಮ ಸಾಮರ್ಥ್ಯಕ್ಕನುಸಾರ ಉನ್ನತ ಸ್ಥಾನಗಳನ್ನು ಧಾರಣಮಾಡಿ ದೇಶದ ರಕ್ಷಣೆಯ ಹೊಣೆ ನಿರ್ವಹಿಸಬಹುದಾಗಿದೆ. ಸರ್ಕಾರದ ವಿವಿಧ ಇಲಾಖೆಗಳಲ್ಲಿರುವ ಉದ್ಯೋಗಗಳು ಈವರೆಗಿನ ತಮ್ಮ ಆಳ್ವಿಕೆದಾರರ ಪಾತ್ರವನ್ನು ಕಳಚಿ ಸ್ವತಂತ್ರ ರಾಷ್ಟ್ರದಲ್ಲಿ ಬದುಕುತ್ತಿರುವ ಅನುಭವ ಜನರಿಗಾಗುವಂತೆ ನಿಜವಾದ ಜನಸೇವಕರಾಗಬೇಕಾಗಿದೆ. ಜನರು ಹಾಗೂ ಸರ್ಕಾರ ಅವರಿಗೆ ಭರವಸೆ ನೀಡಿ ಅವರ ಜೀವನ ಹಾಗೂ ಸೇವಾಕ್ಷೇತ್ರ ಹಿತಕರವೆನಿಸುವ ಭರವಸೆ ಮೂಡಿಸಬೇಕು.

ಭಾರತದಲ್ಲಿ ಪ್ರವೇಶ ಪಡೆದ ಭಾರತೀಯ ರಾಜ್ಯಗಳನ್ನು ನಾವು ಸ್ವಾಗತಿಸುತ್ತೇವೆ. ಅಲ್ಲಿನ ಜನರೆಡೆ ಸ್ನೇಹಹಸ್ತ ಚಾಚುತ್ತೇವೆ. ಆ ರಾಜ್ಯಗಳ ರಾಜಕುಮಾರರು ಹಾಗೂ ಆಳ್ವಿಕೆದಾರರಿಗೆ ಅವರ ವಿರುದ್ಧ ನಮ್ಮಲ್ಲಿ

ಯಾವುದೇ ಸಂಚು ಇಲ್ಲವೆಂದು ತಿಳಿಸುತ್ತೇವೆ. ಅವರು ಇಂಗ್ಲೆಂಡ್ ದೊರೆಯ ಮೇಲ್ಪಂಕ್ತಿಯನ್ನನುಸರಿಸಿ ಸಂವಿಧಾನಬದ್ಧ ಆಳ್ವಿಕೆದಾರರಾಗಿರುತ್ತಾರೆಂದು ನಂಬಿದ್ದೇವೆ. ಯೂರೋಪಿನ ರಾಜಪದ್ಧತಿಗಳು ಉರುಳಿಬಿದ್ದಾಗಲೂ, ಒಂದರ ಹಿಂದೆ ಇನ್ನೊಂದು ಬಂದ ಎರಡು ಜಾಗತಿಕ ಯುದ್ಧಗಳ ಆಘಾತವನ್ನು ತಾಳಿಕೊಂಡು ನಿಂತ ಬ್ರಿಟಿಷ್ ರಾಜಪ್ರಭುತ್ವ ಪದ್ಧತಿಯನ್ನು ಮಾದರಿಯಾಗಿ ಇರಿಸಿಕೊಳ್ಳುತ್ತಾರೆ.

ಬ್ರಿಟಿಷ್ ವಸಾಹತುಗಳಲ್ಲಿ ಮತ್ತು ಬೇರೆ ದೇಶಗಳಲ್ಲಿ ನೆಲೆಸಿರುವ ಭಾರತೀಯರಿಗೆ ನಮ್ಮ ಶುಭಾಶಯಗಳನ್ನು ತಿಳಿಸಿ, ಅವರ ಒಳಿತಿನ ಬಗ್ಗೆ ನಮಗಿರುವ ಆಸಕ್ತಿಯ ಬದ್ಧತೆ ಕುರಿತು ಅವರಿಗೆ ಖಚಿತ ಪಡಿಸೋಣ. ನಮ್ಮ ದೇಶದಲ್ಲಿರುವ ಅಲ್ಪಸಂಖ್ಯಾತರನ್ನು ಯುಕ್ತವಾಗಿ ಹಾಗೂ ನ್ಯಾಯಯುತವಾಗಿ ನಡೆಸಿಕೊಳ್ಳಲಾಗುವುದೆಂದು ಅವರ ಹಕ್ಕುಗಳನ್ನು ಗೌರವಿಸಿ ಸಂರಕ್ಷಿಸಲಾಗುವುದೆಂದು ಭರವಸೆ ನೀಡೋಣ.

ಈಗ ನಮ್ಮ ಕೈಯಲ್ಲಿರುವ ಮಹತ್ಕಾರ್ಯಗಳ ಪೈಕಿ ಒಂದಾದ ಕಾರ್ಯ ಸಂವಿಧಾನವನ್ನು ಪೂರ್ಣಗೊಳಿಸುವುದು. ಅದರಿಂದ ಪ್ರತಿಯೊಬ್ಬರಿಗೂ ಅವರ ಸ್ವಾತಂತ್ರ್ಯ ಹಾಗೂ ಅನಿರ್ಬಂಧತೆಯನ್ನು ಖಚಿತಪಡಿಸಿದಂತಾಗುತ್ತದೆ. ಅಲ್ಲದೆ ಅದನ್ನು ಪೂರ್ಣಗೊಳಿಸಿ ಅದರ ಫಲಿತಾಂಶಗಳನ್ನು ಅನುಭವಿಸಲು ಸಾಧ್ಯವಾಗುತ್ತದೆ. ಸಾಧ್ಯವಾದಷ್ಟು ಬೇಗ ನಾವು ಈ ಕೆಲಸವನ್ನು ಪೂರ್ಣಗೊಳಿಸಬೇಕು. ತನ್ಮೂಲಕ ನಾವೇ ರಚಿಸಿದ ಸಂವಿಧಾನದಡಿ ಹೆಮ್ಮೆಯಿಂದ ಬದುಕಲು, ಕೆಲಸ ಮಾಡಲು ತೊಡಗುತ್ತೇವೆ, ಹಾಗೂ ನಮ್ಮ ಜನತೆಯ ಒಳಿತನ್ನು ಚಿರಂತನವಾಗಿ ರಕ್ಷಿಸಿ, ಕಾಪಾಡಲು ಹಾಗೂ ಮನುಕುಲದ ಸೇವೆ ಮಾಡುವ ಹೆಮ್ಮೆ ಹಾಗೂ ಅವಕಾಶ ನಮ್ಮದಾಗುತ್ತದೆ. ಸಂವಿಧಾನವನ್ನು ರಚಿಸುವುದರಿಂದ ನಮ್ಮ ಸಂಪ್ರದಾಯಗಳನ್ನು ಹಾಗೂ ನಮ್ಮ ಸುತ್ತಮುತ್ತಲಿನ ದೇಶಗಳನ್ನು ಕುರಿತು ಸಹಜವಾಗಿಯೇ ಅನುಭವ ಹಾಗೂ ಜ್ಞಾನ ಪಡೆಯುತ್ತೇವೆ ಅಷ್ಟೇ ಅಲ್ಲ, ಕೆಲವು ಬಾರಿ, ಇತ್ತೀಚಿನ ಇತಿಹಾಸದ ಮೂಲಕ ಎಳೆಯಲಾಗಿರುವ ಗೆರೆಗಳನ್ನು ಲೆಕ್ಕಕ್ಕೆ ತಾರದೆ ಪ್ರಾಂತ್ಯಗಳ ಹೊಸ ಗಡಿರೇಖೆಗಳನ್ನು ಗುರುತಿಸಿ ಅವುಗಳ ಅಧಿಕಾರ ಹಾಗೂ ಪ್ರಕಾರ್ಯಗಳನ್ನು ವಿಧಿಸುವುದು ಸಾಧ್ಯವಾಗುತ್ತದೆ. ಜನತೆಯ ಇಚ್ಛೆ ವ್ಯಕ್ತವಾಗಿ ಅದನ್ನು ಅನುಷ್ಠಾನಗೊಳಿಸಲು ನಮ್ಮನ್ನು ಶಕ್ತರನ್ನಾಗಿಸುವ ಹಾಗೂ ವೈಯಕ್ತಿಕ ಸ್ವಾತಂತ್ರ್ಯವನ್ನು ಸಂಪಾದಿಸುವುದಷ್ಟೇ ಅಲ್ಲದೆ ಅದು ಇತರರೆಲ್ಲರ ಒಳಿತಿನೊಂದಿಗೆ ಹೊಂದಿಕೆಯಾಗುವಂತೆ ಹಾಗೂ ಅದಕ್ಕೆ ಅಧೀನವಾಗಿರುವಂತೆ ನೋಡಿಕೊಳ್ಳುವ ಸಂವಿಧಾನವನ್ನು ರಚಿಸುವ ಆದರ್ಶ ನಮ್ಮದು.

ಈವರೆಗೆ ನಾವು ಸ್ವಾತಂತ್ರ್ಯ ಗಳಿಸಲು ಹಾಗೂ ಅದನ್ನು ಸಾಧಿಸುವುದಕ್ಕಾಗಿ ಯಾವುದೇ ಸಂಕಷ್ಟ ಬಲಿದಾನಗಳನ್ನಾದರೂ ಎದುರಿಸುವ ಪಣ ತೊಟ್ಟಿದ್ದೆವು. ಈಗ ಇನ್ನೊಂದು ಬಗೆಯ ಪಣ ತೊಡಬೇಕಾದ ಕಾಲ ಬಂದಿದೆ. ಕೆಲಸ ಹಾಗೂ ಬಲಿದಾನದ ಸಮಯ ಮುಗಿದು ಸ್ವಾತಂತ್ರ್ಯದ ಸವಿಯನ್ನು ಅನುಭವಿಸುವ ಕಾಲ ಬಂದಿದೆ ಎಂದು ಯಾರೂ ಕಲ್ಪನೆ ಮಾಡಿಕೊಳ್ಳುವಂತಿಲ್ಲ ಈವರೆಗೆ ಇದ್ದಂತೆಯೇ ಇನ್ನು ಮುಂದೆಯೂ ನಿಸ್ವಾರ್ಥದ ದುಡಿಮೆಗಾಗಿ ನಮ್ಮ ಉತ್ಸಾಹ ಹಾಗೂ ಸಾಮರ್ಥ್ಯ ಅಗತ್ಯಕ್ಕಿಂತ ಹೆಚ್ಚಾಗಿಯೇ ಇರುತ್ತದೆಂಬುದನ್ನು ನಾವು ಮನಗಾಣಬೇಕು. ನಮ್ಮನ್ನು ಕೈಬೀಸಿ ಕರೆಯುತ್ತಿರುವ ಮಹತ್ತರ ಕಾರ್ಯಕ್ಕಾಗಿ, ನಮ್ಮನ್ನು ನಾವು ಮತ್ತೊಮ್ಮೆ ಅರ್ಪಿಸಿಕೊಳ್ಳೋಣ. ಕಾರ್ಯ ಮಹತ್ತರವಾದುದಾಗಿದೆ. ಹಾಗೂ ಕಾಲ ಕೂಡಿಬಂದಿದೆ. ಅದನ್ನು ಸಾಧಿಸುವ ಬಲ ಬುದ್ಧಿ ಹಾಗೂ ಧೈರ್ಯ ನಮ್ಮಲ್ಲಿರಲಿ ಎಂದು ಪ್ರಾರ್ಥಿಸೋಣ.

### ರಾಷ್ಟ್ರಧ್ವಜಾರೋಹಣ

**ಮಾನ್ಯ ಸಭಾಧ್ಯಕ್ಷರು :** ಘನತೆವೆತ್ತ ಗವರ್ನರ್–ಜನರಲ್ ಧ್ವಜಾರೋಹಣಕ್ಕೆ ಈಗ ಸೂಚನೆ ನೀಡುತ್ತಾರೆ.

(ಬಂದೂಕಿನಿಂದ ಗುಂಡು ಹಾರಿದ ಶಬ್ದ)

**ಘನತೆವೆತ್ತ ಗವರ್ನರ್–ಜನರಲ್ :** ಈ ಚಾವಣಿಯ ಮೇಲೆ ಧ್ವಜಾರೋಹಣ ಮಾಡುವುದಕ್ಕೆ ಇದು ಸೂಚನೆ.

**ಮಾನ್ಯ ಸಭಾಧ್ಯಕ್ಷರು :** ಸದನವನ್ನು ೨೦ನೇ ದಿನಾಂಕದ ಬೆಳಗ್ಗೆ ೧೦ ಗಂಟೆಗೆ ಮುಂದೂಡಲಾಗಿದೆ.

**ಗೌರವಾನ್ವಿತ ಸದಸ್ಯರು :** ಮಹಾತ್ಮ ಗಾಂಧೀ ಕಿ ಜೈ.

ಮಹಾತ್ಮ ಗಾಂಧೀ ಕಿ ಜೈ.

ಪಂಡಿತ್ ಜವಾಹರಲಾಲ್ ನೆಹರು ಕಿ ಜೈ

ಲಾರ್ಡ್ ಮೌಂಟ್‌ಬಾಟನ್ ಕಿ ಜೈ

ಅನಂತರ ಸಭೆಯನ್ನು ೧೯೪೭ರ ಆಗಸ್ಟ್ ೨೦ನೇ ಬುಧವಾರ ಬೆಳಗ್ಗೆ ೧೦ ಗಂಟೆಗೆ ಮುಂದೂಡಲಾಯಿತು.

*[ಹಿಂದೂಸ್ತಾನಿ ಭಾಷಣದ ಇಂಗ್ಲಿಷ್ ಅನುವಾದ]*